Licence No. 60,
Licenced to Post without Prepayment

Reg. No. M. 1550,
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೩೨-೮-೧೯೫೩ನೇ ಶುಕ್ರವಾರ | ಸಂಚಿಕೆ ೧೨

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:-THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸರಿಯೂದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮೂ ಕಂಪೆನಿಗಳಲ್ಲಿ ಜುಬಿಲಿಯಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:-ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಪತೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,
41-C, ರಿಚ್‌ಮಂಡ್ ರೋಡ್, ಬೆಂಗಳೂರು 1.
21

॥ ಸಂಘಟಿತ ಪ್ರಯತ್ನ ॥

ಗಾಂಧೀಜಿಯವರ ಹೆಸರಿನ ಉಪಯೋಗ ಮಾಡಿಕೊಳ್ಳುವ ವಿಚಾರದಲ್ಲಿ ನಾನು ವ್ಯಕ್ತಪಡಿಸಿರುವ ಅಭಿಪ್ರಾಯದ ಹೊಂತಾಗಿ, ವಿನೋಬಾ ಬೀನಳ ಮುಖ್ಯ ವಿಷಯಗಳಿಗೆ—ಒಂದೇ ಒಂದು ಸುಸ್ಪಷ್ಟ ಮತ್ತು ಕಾರ್ಯಯೋಗ್ಯವಾದ ಕಾರ್ಯಕ್ರಮ ಇಟ್ಟಾಗಿ ನಾವೆಲ್ಲ ಒಕ್ಕಟ್ಟಾಗಿ ಸಂಘಟಿತ ಪ್ರಯತ್ನ ಮಾಡಬೇಕೆಂಬ ವಿಷಂತಿಗೆ ನನ್ನ ಸಂಪೂರ್ಣ ಅಭಿಮತಿಯಿದೆ. ಮತ್ತು, ಇನ್ನೊಂದು ಹೆಜ್ಜೆ ಮುಂಪೆ ಹೋಗಿ ಗಾಂಧೀ ಗುಂಪೆಂದು ಹೇಳಿಕೊಳ್ಳುವವರು ಒಂದಾಗಬೇಕು ಎಂದು ಕೇಳಿಕೊಳ್ಳುವದಲ್ಲದೆ ಗಾಂಧೀ ಗುಂಪಿಗೆ ಸೇರಿರಲಿ, ಬೇಡ ಯಾವುದೊಂದೂ ಗುಂಪಿಗೆ ಸೇರಿರಲಿ, ಅಥವಾ ಯಾವ ಗುಂಪಿಗೂ ಸೇರಿದಿರುವವರಾಗಲಿ—ಜನಸೇವೆ ಮಾಡಬೇಕೆನ್ನುವ ಪ್ರತಿಯೋರ್ವರೂ ಒಂದೆಡೆ ಸೇರಬೇಕೆಂದು ಕೇಳಿಕೊಳ್ಳುತ್ತೇನೆ. ವಿವಿಧ ತತ್ವ ಮತ್ತು ಅಭಿಪ್ರಾಯಗಳ ಬಗ್ಗೆ ಬೇಕಾದಷ್ಟು ಭಿನ್ನಾಭಿಪ್ರಾಯಗಳಿದ್ದರೂ ಇಡೀ ರಾಷ್ಟ್ರವು ಒಂದೇ ಅಭಿಪ್ರಾಯವನ್ನು ಹೊಂದಿರುವ ಮತ್ತು ಸಕಲರೂ ಕೂಡಿ ಕೆಲಸ ಮಾಡಬಹುದಾದ ಕೆಲ ಸರ್ವಸಾಮಾನ್ಯ ವಿಷಯಗಳಿರಲೇಬೇಕು.

ಇನ್ನೂ ಒಂದು ವಿನ್ನಹ ಮಾಡಿಕೊಳ್ಳುತ್ತೇನೆ. ಪಮ್ಮ ದೇಶವನ್ನು ಕಮ್ಯೂನಿಜಂ ಅಥವಾ ಅನೇಕನಿಜಂ ಆಕ್ರಮಿಸುತ್ತಿದೆ ಎಂಬ ಆಂಜಿಕೆಯನ್ನು ತೊಡೆದು ಹಾಕೋಣ. ನಾವು ಒಕ್ಕಟ್ಟಾಗಿ ಕೆಲಸ ಮಾಡದಿದ್ದಕ್ಕೆ ಇವುಗಳಲ್ಲೊಂದು ಅಥವಾ ಎರಡೂ ನಮ್ಮ ದೇಶವನ್ನು ಆಕ್ರಮಿಸಬಹುದು ಎಂಬ ಆಂಜಿಕೆಯಿಂದ ನಾವು ಒಕ್ಕಟ್ಟಾಗಿ ಕೆಲಸ ಮಾಡಬೇಕು ಎಂದಲ್ಲಿ ಸತ್ಯದ ಕಚ್ಚಟಾಯಕ ಪರಿಸ್ಥಿತಿಯಿಂದ ಪಮ್ಮನ್ನೂ ಪಮ್ಮ ಜನರನ್ನೂ ಮೇಲಕ್ಕೆತ್ತುವವರ ಸಲುವಾಗಿ ನಾವೆಲ್ಲ ಒಕ್ಕಟ್ಟಾಗಿ ಸಂಘಟಿತ ಪ್ರಯತ್ನ ಮಾಡುವದು ನಮ್ಮ ಕರ್ತವ್ಯವಾಗಿದೆ. ಕಮ್ಯೂನಿಜಂ ಮತ್ತು ಅನೇಕನಿಜಂ ಎರಡೂ ಈಗ ಪಮ್ಮಲ್ಲಿ ನಮ್ಮ ಜೊತೆಯಲ್ಲಿ ಇವೆ. ಅದರಂತೆ ನನ್ನದೇ ಆದ ಜಾತೀಯವಾದ ಹಾಗೂ ಇತರ 'ಇಜಂ'ಗಳೂ ಪಮ್ಮ ಜೊತೆಯಲ್ಲಿ ಇವೆ. ಇವೆಲ್ಲವುಗಳ ಕೈವಾಡಿಗಳು ಪಮ್ಮ ಜನರಲ್ಲಿಯೇ ಇದ್ದಾರೆ. ಇವೆಲ್ಲವುಗಳಲ್ಲಿ ನಾವು ಆಕರ್ಷಿಸಲ್ಪಡದಿರುವ ಕೆಲ ವಿಚಾರಗಳಿವೆ; ಮತ್ತು ಆವುಗಳಲ್ಲಿ ಆಪಾಯಕರವಾದ ಕೆಲ ವಿಚಾರಗಳೂ ಇವೆ. ಅವುಗಳಿಗೆ ಅಂಜುವದಾಗಲಿ ಆಥವಾ ಅಸಹಾಯಕರಂತೆ ಅವುಗಳಿಗೆ ಬಲಿಯಾಗುವದಾಗಲಿ ನಮಗೆ ಸಹಾಯಕವಾಗವು. ನನ್ನ ಪ್ರೇಮ ಮತ್ತು ಅಹಿಂಸೆಗಳಲ್ಲಿ ಏನಾದರೂ ಪರಿಣಾಮಕಾರಕ ಶಕ್ತಿಯಿರುವದಾದರೆ ನಾವು ಈ ವಿಷಯದಲ್ಲಿ ಸತ್ಯಹೀನರಾಗಿ ಅವುಗಳಲ್ಲಿ ಪ್ರತಿಯೊಂದರಲ್ಲಿರುವ ಸತ್ಯ ಹಾಗೂ ಹಿತಕಾರಿ ಅಂಶವನ್ನು ಕಂಡೂ ಹಿಡಿಯಬೇಕು.

ಪ್ರಬಲವಾದೊಂದು ರಾಷ್ಟ್ರೀಯ ಪ್ರಯತ್ನವನ್ನು ಪೂಡುವದಕ್ಕಾಗಿ ನಾವೆಲ್ಲ ಒಂದಾಗಬೇಕು; ಒಕ್ಕಟ್ಟನ್ನು ಸಾಧಿಸಲು ಅಹಿಂಸೆಯನ್ನು ಬೆಳೆಸಬೇಕು; ನಾವು ಪ್ರೇಮವನ್ನು ವೈಗೂಡಿಸಿಕೊಂಡರೆ ಅಹಿಂಸೆಯನ್ನು ಬೆಳೆಸಬಹುದು. ಎಲ್ಲ ಗುಂಪುಗಳ ಬಗ್ಗೆ ಆಥವಾ ಯಾವುದೊಂದು ವಿಶಿಷ್ಟ ಗುಂಪಿನ ಬಗ್ಗೆ ವಿಚಾರ ಮಾಡಿದರೂ, ಕೆಟ್ಟ ದುಃಖಗಳಿದ್ದರೂ ಸಹಿತ ಪ್ರಬಲ ಪ್ರಯತ್ನ ಮಾಡುವದರಲ್ಲಿ ನಾವು ಆಯಶಸ್ವಿಗಳಾದರೆ ಅದು ಒಕ್ಕಟ್ಟಿನ ಅಭಾವದಿಂದಲೇ ಆಗಿರಬೇಕು; ಸಂಬಂಧಿಸಿದ ಗುಂಪು ಆಥವಾ ಗುಂಪುಗಳಲ್ಲಿ ಅಹಿಂಸೆಯು ಲೋಪವಿತ್ತೆಂಬುದೇ ಅದರರ್ಥ; ಗುಂಪು ಆಥವಾ ಗುಂಪುಗಳಲ್ಲಿಯು ಜನರಲ್ಲಿ ಪ್ರೇಮ—ಸ್ನೇಹ ಹೆಗಳಲ್ಲವೆಂದೇ ಅದರ ತಾತ್ಪರ್ಯ.

ಸಕಲರೂ ಮನಸಾ ಒಪ್ಪಿಕೊಳ್ಳುವ ಒಂದು ಸಾಮಾನ್ಯ ಕಾರ್ಯಕ್ರಮವನ್ನು ಹಾಕಿಕೊಳ್ಳುವದು ಅತ್ಯವಶ್ಯವೇನಲ್ಲ. ಅದರಿಂದ ಗುಂಪಿನ ಸದಸ್ಯರಲ್ಲಿ ಪ್ರೇಮ—ಸ್ನೇಹಗಳಿಲ್ಲದಿದ್ದರೆ ಸಾಮಾನ್ಯ ಕಾರ್ಯಕ್ರಮವು ಪ್ರಬಲ ಪ್ರಯತ್ನವನ್ನು ಪ್ರಚೋದಿಸಲಾರದು. ಆಳವಾಗಿ ವಿಚಾರ ಮಾಡಿದರೆ ಭಾರತ ಆಥವಾ ಅದರಲ್ಲಿಯ ಪರಿಣಾಮಕಾರಿಯಲ್ಲದ ಗುಂಪುಗಳು (ಸರಕಾರವನ್ನೂ ಇವರಲ್ಲಿ ಸೇರಿಸಬಹುದು) ಬುದ್ಧಿಹೀನಗಳ ಕೊರತೆಯಿಂದ ಪರಿಣಾಮಕಾರಿ ಕೆಲಸ ಮಾಡುತ್ತಿಲ್ಲ ಎಂದು ಕಂಡುಬರುವದಿಲ್ಲ. ಆದರೆ ಅವುಗಳ ಸದಸ್ಯರಲ್ಲಿ ಪ್ರೇಮ ಸ್ನೇಹಗಳಲ್ಲದ ಮೂಲಕ ಅವುಗಳ ಕಾರ್ಯ ಯಶಸ್ವಿಯಾಗುವದಿಲ್ಲವೆಂಬುದು ಕಂಡುಬರುತ್ತದೆ. ನನ್ನಲ್ಲಿ ಬೇಕಷ್ಟು ಬುದ್ಧಿವಂತಿಕೆಯಿದ್ದರೂ ಅದನ್ನು ನಾವು ಜೀರ್ಣಿಸಿಕೊಂಡಿಲ್ಲ ಮತ್ತು ನಾನು ಅದರ ಬಗ್ಗೆ ವ್ಯರ್ಥಾಭಿಮಾನ ತಳುವಂತಾಗಿದೆ. ಇದರಿಂದ ಸಹಕಾರದ ಬೆಳವಣಿಗೆಗೆ ಅಗತ್ಯವಾದ ವಿನಯಶೀಲತೆ ಮತ್ತು ನಿರಹಂಕಾರಗಳು ನನ್ನಲ್ಲಿರುವದಕ್ಕೆ ಅತಂಕವಾಗಿದೆ ಮತ್ತು ಸಹಕಾರದ ಕೊರತೆಯಿಂದ ಎಲ್ಲ ಪ್ರಯತ್ನಗಳೂ ವ್ಯರ್ಥವಾಗಿ ಮಾಡಿದ ವೆಚ್ಚವೆಲ್ಲ ಅಪವ್ಯಯವಾಗುತ್ತದೆ.

ಆದರೆ ಈ ಮಾತುಗಳು ನನ್ನ ಹೃದಯದ ನಿರಾಶೆಯ ನುಡಿಗಳು ಎಂದು ಭಾವಿಸಲ್ಪಡದಿರಲಿ. ಇದ್ದ ಪರಿಸ್ಥಿತಿಯನ್ನು ಕುರಿತು ಹೇಳಿದ ಮಾತುಗಳವು. ಆಚಾರ್ಯ ವಿನೋಬಾರ ಜಳವಳಿಯಲ್ಲಿ ದೇಶದಲ್ಲಿ ಹೊಸ ವಾತಾವರಣ ಉಂಟಾಗುತ್ತಿರುವದರ ಲಕ್ಷಣಗಳು ನನಗೆ ಈಗಾಗಲೇ ಕಂಡುಬರುತ್ತಿವೆ. ಉತ್ಕರ್ಷವಾದುದನ್ನು ಸಾಧಿಸುವ ಬದಲಾವಣೆಯನ್ನು ಅದು ಸೂಚಿಸುತ್ತದೆ. ಅದುಪರಿಂದ ಭೂದಾನ ಯಜ್ಞವನ್ನು ಸಾಂಗಗೊಳಿಸಲು ನಾವು ಗಾಂಧಿ ಗುಂಪಿನವರಿರಲಿ ಆಥವಾ ಬೇರೆ ಗುಂಪಿನವರಿರಲಿ, ಎಲ್ಲರೂ ಒಟ್ಟಾಗಿ ಶ್ರಮಿಸೋಣ.

ಈ ಒಂದು ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿಸಲ್ಪಟ್ಟಲ್ಲಿ ಗಾಂಧೀಜಿಯ ಸ್ವರಾಜ್ಯ ಸಾಧನೆಯ ಮಾರ್ಗವು ಸುಗಮವಾದೀತು ಮಾತ್ರವಲ್ಲ, ನಮ್ಮನ್ನೆಲ್ಲ ಪ್ರೇಮ ಬಂಧನದಲ್ಲಿ ಕಟ್ಟಿಹಾಕೀತು. ಈ ಕಾರ್ಯಕ್ರಮದಲ್ಲಿ ನಮ್ಮೆಲ್ಲರ ಶಕ್ತಿ ಸಾಹಸಗಳನ್ನು ಕೇಂದ್ರೀಕರಿಸೋಣ.

ಕಿ. ಫೆ. ಮಂಜುವಾಲಾ.

ಆಪಾಯದ ಭವಿಷ್ಯ

ಈಜಿಪ್ಟಿನ ಪ್ರಖ್ಯಾತ ಜ್ಯೋತಿಷಿಯೂದ ಮಹಮ್ಮದ ಯೂಸುಫ ಎಲ್‌ವಿನಿಯೂವಿ ಎಂಬವನು ಜಾಗತಿಕ ಭವಿಷ್ಯವನ್ನು ಮೊನ್ನೆ ಸಾರಿದ್ದಾನೆ. ಅವನ ಹೇಳಿಕೆ ಕೆಳಗಿನಂತಿದೆ:—

ಈಜಿಪ್ಟಿನಲ್ಲಿ

ಈಜಿಪ್ಟಿನಲ್ಲಿ ಮುಸಲ್ಮಾನ ಬಂಧುವರ್ಗವು (ಮೊಸ್ಲೆಮ್ ಬ್ರದರ್‌ಹುಡ್) ರಾಜಕೀಯ ರಂಗದಲ್ಲಿ ಮೇಲೆ ಬಂದು ತನ್ನ ಪ್ರಭಾವ ಬೀರುವದು.

ಈಜಿಪ್ಟ್ ಮತ್ತು ಬ್ರಿಟನ್‌ಗಳ ನಡುವೆ ಸುಯೇಜ ಕಾಲುವೆ ಮತ್ತು ಸೂಡಾನಗಳ ಒಡೆತನದ ಬಗ್ಗೆ ಮೂತ್ರಿಕೆಗಳು ನಡೆದು ಮುಖ್ಯ ಮಂತ್ರಿ ಅಲಿಮೆಹರವಂಗೆ ಗೆಲುವು ಬರುವುದು. ಈಜಿಪ್ಟಿನಿಂದ ಬ್ರಿಟಿಷ್ ಸೈನ್ಯ ಹೊರಬೀಳಬೇಕೆಂದೂ, ಸೂಡಾನವು ಈಜಿಪ್ಟಿನ ಆಧಿಪತ್ಯಕ್ಕೆ ಒಳಗಾಗಬೇಕೆಂದೂ ಈಜಿಪ್ಟ ಬ್ರಿಟನ್ನುಗಳ ಒಡಂಬಡಿಕೆಯೂಗಿ ಎರಡೂ ರಾಷ್ಟ್ರಗಳು ಅಂಕಿತ ಹಾಕುವವು.

ಒಮ್ಮಿಂದೊಮ್ಮೆ ಅಲಿಮೆ ಹೆಸರಿನ ಮುಖ್ಯ ಮಂತ್ರಿ ಪದಕ್ಕೆ ರಾಜೀನಾಮೆ ಕೊಡುವರು. ಮತ್ತು ಕೆಲದಿನಗಳ ಮೇಲೆ ಮತ್ತೆ ನೊದಲಿಗಿಂತಲೂ ಹೆಚ್ಚು ಪ್ರಭಾವಶೀಲರಾಗಿ ಅಧಿಕಾರ ಸೂತ್ರ ವಹಿಸಿ ಅನೇಕ ವರ್ಷಗಳ ವರೆಗೆ ಆಡಳಿತ ನಡೆಸಿ ಈಜಿಪ್ಟಿನ ಉದ್ಧಾರ ಮಾಡುವರು.

ಭಾರತದಲ್ಲಿ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧವಾಗುವ ಸಂಭವವಿದೆ.

ದೂರಪ್ರಾಚ್ಯದಲ್ಲಿ

ಮಂಚೂರಿಯೂದ ಮೇಲೆ ಅಮೇರಿಕೆಯ ವಿಮಾನಗಳು ಹೆಚ್ಚೆಚ್ಚು ಪ್ರಮಾಣದಲ್ಲಿ ಬಾಂಬು ದಾಳಿ ಮಾಡುವದರಿಂದ ಪರಿಸ್ಥಿತಿ ತೀರ ವಿಕೋಪಕ್ಕೆ ಹೋಗುವದು. ಮತ್ತು ಕೊರಿಯಾದಲ್ಲಿ ಅಮೇರಿಕೆಗೆ ಅತೀವ ಹಾನಿಯೂಗುವದು.

ಇರಾಣದಲ್ಲಿ

ಇರಾಣದಲ್ಲಿ ಮುಖ್ಯ ಮಂತ್ರಿ ಡಾ. ಮುಸಾದಿಕರು ಮುಖ್ಯ ಮಂತ್ರಿ ಪದಕ್ಕೆ ರಾಜೀನಾಮೆ ಕೊಡುವರು. ಅದರ ಪರಿಣಾಮವು ಅರಸೊತ್ತಿಗೆಯ ಮೇಲೂ ಆಗುವದು.

ಚಿಯೊಂಗರ ಆಗಮನ—ನಿರ್ಗಮನ

ಚಯೊಂಗ ಕೈಶೇಕರು ಮತ್ತೊಮ್ಮೆ ರಾಜಕೀಯ ಕ್ಷಿತಿಜದಲ್ಲಿ ಮೇಲಕ್ಕೆ ಒಂದು ಆಕಸ್ಮಾತ್ತಾಗಿ ಮೂಡುವಾಗುವರು.

———

ಅಮೇರಿಕ ಭಾರತಕ್ಕೆ ಕೊಟ್ಟ ಆರ್ಥಿಕ ಸಹಾಯದ ನಿಜಾಂಶಗಳು.

ಅಮೇರಿಕಾವು ಭಾರತಕ್ಕೆ ಕೊಟ್ಟ ಆರ್ಥಿಕ ಸಹಾಯದ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ಹೊಸ ಕಾರ್ಯಕ್ರಮದ ಮೂಲವನ್ನು ತಿಳಿಯಲು ಅನೇಕರು ಕುತೂಹಲಿಗಳಾಗಿದ್ದಾರೆ. ಕೆಲವರು ಅಪಾರ್ಥವನ್ನು ಕಲ್ಪಿಸಿ ಪ್ರಶ್ನೆಗಳನ್ನು ಕೇಳಿದ್ದಾರೆ

ಅಮೇರಿಕಾ ಸರಕಾರದ ಸುದ್ದಿ ಶಾಖೆಯು ಭಾರತ ಅಮೇರಿಕಾ ಸೌಹಾರ್ದತೆಗೆ ಸಂಬಂಧ ಪಟ್ಟ ಈ ಪ್ರಶ್ನೆಗಳಿಗೆ ಉತ್ತರ ಕೊಡಲು ಈ ಹೊಸ ಉದ್ಯಮದಲ್ಲಿ ಪ್ರಯತ್ನಿಸುವರು.

ಭಾರತವನ್ನು ಬಿಟ್ಟು ಉಳಿದ ಯಾ ಪುಷ್ಟಾದಕೂ ದೇಶಗಳಿಗೆ ಅಮೇರಿಕಾವು ಸಹಾಯ ಮಾಡುತ್ತಿದೆಯೇ?

ಹೌದು ಅಮೇರಿಕದ ಸಹಾಯವು ಎರಡು ರೀತಿಯಲ್ಲಿದೆ. ಪೊದಲನೆಯದು ವಿಲಿಟರಿ ಸಹಾಯ. ಈ ಸಹಾಯವನ್ನು ಮುಖ್ಯವಾಗಿ ಯುರೋಪಿನ ದೇಶಗಳಿಗೆ ಕೊಟ್ಟಿದೆ. ಕಾರಣ ಸೋವಿಯಟ್ ದಾಳಿಯ ಹೆದರಿಕೆ. ಯುದ್ಧ ಸಾಮಗ್ರಿಗಳನ್ನಲ್ಲದೆ ಇನ್ನೂ ಆರ್ಥಿಕ ಸಹಾಯವನ್ನು ಈ ದೇಶಗಳಿಗೆ ಅಮೇರಿಕಾವು ಕೊಡುವುದು, ಅಮೇರಿಕ ರಕ್ಷಣಾ ಶಾಖೆಯವರು ವಿಲಿಟರಿ ಸಹಾಯವನ್ನು ಕೊಡುವರು. ಪರಸ್ಪರ ರಕ್ಷಣಾ ನಿಧಿಯವರು ಆರ್ಥಿಕ ಸಹಾಯವನ್ನು ಕೊಡುವರು. ಎರಡನೆಯ ವಿಧದ ಸಹಾಯವು ಭಾರತಕ್ಕೆ ಕೊಟ್ಟಿರುವಂತಹದು ಹಿಂದುಳಿದ ರಾಷ್ಟ್ರಗಳಿಗೆ ಕೊಡುವ ಸಹಾಯ. ಇವರಲ್ಲಿ ಇವ ಬರುವುದು ರೋಗಬಾಧೆಯನ್ನು ನಿವಾರಿಸುವುದು, ಅಪಕ್ಷರತೆ, ಮುಂತಾದುವುಗಳನ್ನು ಹೊಗಲಾಡಿಸಿ ದೇಶವನ್ನು ಅಭಿವೃದ್ಧಿ ಮಾಡುವುದೇ ಈ ಸಹಾಯದ ಉದ್ದೇಶ.

ಈ ತರಹವಾದ ಆರ್ಥಿಕ ಸಹಾಯವನ್ನು ಅಮೇರಿಕವು ೫೩ ದೇಶಗಳಿಗೆ ಕೊಡುತ್ತಿದೆ. ಅವ್ಯಾವುವೆಂದರೆ, ಅಫ್ಘಾನಿಸ್ತಾನ, ಬೋಲಿವಿಯ, ಬ್ರೆಜಿಲ್ ಚಿಲಿ, ಕೊಲಂಬಿಯ, ಕೋಸ್ಟರೀಕಾ, ಕ್ಯೂಬ, ದಿ ಡೊವಿನಿಯನ್ ರಿಪಬ್ಲಿಕ್, ಈಕ್ವೆಡಾರ್, ಈಜಿಪ್ಟ, ಎಲ್‌ಸಾಲ್ವೆಡಾರ್, ಇತಿಯೋಪಿಯ, ಗೌಟೆ ಮೂಲಾ, ಹೈಟಿ, ಹೊಂಡುರಾಸ್, ಇಂಡಿಯಾ, ಇರಾನ್, ಇರಾಕ್, ಇಸ್ರೇಲ್, ಜೋರ್ಡಾನ್, ಲೆಬನಾನ್, ಲೈಬೀರಿಯ, ಲಿಬಿಯ, ಮೆಕ್ಸಿಕೋ, ನೇಪಾಲ್ ನಿಕವಾಗುವ, ಪಾಕಿಸ್ತಾನ, ಪನಾಮ, ಪರಗ್ವೆ, ಪೆರು, ಸೌಡಿ ಅರೇಬಿಯ, ಉರುಗ್ವೆ, ಮತ್ತು ವೆನೆಜುಲ.

ನಾಲ್ಕು ಅಂಶಗಳ ಯೋಜನೆಗೂ ಈ ಕಾರ್ಯಕ್ರಮಗಳಿಗೂ ಏನಾದರೂ ವ್ಯತ್ಯಾಸವಿದೆಯೇ?

ಹಿಂದುಳಿದ ರಾಷ್ಟ್ರಗಳಿಗೆ ಸಹಾಯ ಮಾಡುವ ಎಲ್ಲಾ ಸಹಾಯ ಯೋಜನೆಗಳಿಗೂ ಜನಾದರಣೀಯವಾಗಿ ನಾಲ್ಕು ಅಂಶಗಳ ಯೋಜನೆ ಎಂದು ಕರೆಯಲಾಗುತ್ತಿದೆ. ಅಧ್ಯಕ್ಷ ಟ್ರೂಮನ್ನರು, ೧೯೪೯ನೇ ಜನವರಿ ೨೦ನೇ ತಾರೀಕು ನಾಲ್ಕು ಮುಖ್ಯ ಅಂಶಗಳನ್ನೊಳಗೊಂಡ ವಿದೇಶಾಂಗ ನೀತಿಯನ್ನು ಹೊರಗೆಡಹಿದರು, ಅಂದಿನಿಂದ ನಾಲ್ಕನೇ ಅಂಶವಾದ ಪ್ರಪಂಚಕ್ಕೆ ತಾಂತ್ರಿಕ ಸಹಾಯ ಕೊಡುವ ಅಂಶಕ್ಕೆ ನಾಲ್ಕು ಅಂಶಗಳ ಯೋಜನೆಯೆಂದು ಹೆಸರಾಯಿತು.

ಅನಂತರ ಅಮೇರಿಕ ಶಾಸನ ಸಭೆಯು ಕಾನೂನು ಮಾಡಿ ನಾಲ್ಕು ಅಂಶಗಳ ಯೋಜನೆಗೆ ಹಣವನ್ನು ಒದಗಿಸಿತು.

ಈ ನಿಧಿಯು ಸ್ವಲ್ಪ ಭಾಗವು ವಿಶ್ವ ಸಂಸ್ಥೆಯ ತಾಂತ್ರಿಕ ಸಹಾಯ ಯೋಜನೆಗೆ ಹೋಗುತ್ತದೆ. ವಿಶ್ವಸಂಸ್ಥೆಯಿಂದಲೂ ಭಾರತಕ್ಕೆ ಸಹಾಯ ನೀಡಲಾಗುತ್ತಿದೆ.

ಹಾಗಾದರೆ ಟಿ. ಸಿ. ಎ. ಎಂದರೇನು? ತಾಂತ್ರಿಕ ಸಹಾಯ ಯೋಜನೆಯನ್ನು ಜಾರಿಗೆ ತರಲು ತಾಂತ್ರಿಕ ಸಹಕಾರ ಆಡಳಿತ ಸಮಿತಿಯನ್ನು ರಚಿಸಲಾಯಿತು. ಇದೇ ಟಿ. ಸಿ. ಎ. ಇದು ಅಮೇರಿಕ ರಾಜ್ಯ ಇಲಾಖೆ (ವಿದೇಶಾಂಗ ಇಲಾಖೆ)ಯ ಕೈಕೆಳಗೆ ಕೆಲಸ ಮಾಡುತ್ತದೆ.

ಅಮೇರಿಕದ ಸಹಾಯಪಡೆಯಬಹುದಾದ ವಿವಿಧ ಯೋಜನೆಗಳು ಭಾರತದಲ್ಲಿ ಯಾವುವು? ಭಾರತದ ಪಂಚವಾರ್ಷಿಕ ಯೋಜನೆಯಲ್ಲಿನ ವ್ಯವಸಾಯಾಭಿವೃದ್ಧಿಗೆ ಅಮೇರಿಕವು ಹೆಚ್ಚು ಸಹಾಯವನ್ನು ಒದಗಿಸಿದೆ. ಏಕೆಂದರೆ ಭವಿಷ್ಯ ಭಾರತದ ಆರ್ಥಿಕ ಬೆಳವಣಿಗೆಯು, ಹೆಚ್ಚು ಆಹಾರ ಬೆಳೆಯುವುದರಲ್ಲಿದೆ. ಆದ್ದರಿಂದ ಅಮೇರಿಕದ ಸಹಾಯವು ಹೆಚ್ಚು ಆಹಾರ ಬೆಳೆಯಲು ಸಹಾಯಮಾಡುತ್ತಿದೆ.

ವ್ಯವಸಾಯಾಭಿವೃದ್ಧಿ ಮಾಡಲು ಅಮೇರಿಕವು ಭಾರತದಲ್ಲಿ ೧೧ ವಿಧವಾಗಿ ಸಹಾಯಮಾಡುತ್ತದೆ. ಹೀಗೆಂದು ಭಾರತದೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಇವರಲ್ಲಿ ಮುಖ್ಯವಾದುದು ಸಮೂಹ ವಿಕಾಸ ಕೇಂದ್ರಗಳ ಯೋಜನೆ–ಭಾರತದಲ್ಲೀಗ ೩೦೦ ಹಳ್ಳಿಗಳ ಜಿಜ ಕೇಂದ್ರಗಳನ್ನು ತೆರೆಯಲಾಗಿದ್ದು ಸುಮಾರು ೨ ಲಕ್ಷ ಜನರ ಬೆಳವಣಿಗೆಯನ್ನೊಳಗೊಂಡಿದೆ. ಈ ಯೋಜನೆಯಿಂದ ಒಂದು ಕೋಟಿ ಜನರ ಅಭಿವೃದ್ಧಿಯಾಗುವುದು. ವ್ಯವಸಾಯದಲ್ಲಿ ನೂತನ ವಿಧಾನಗಳನ್ನು ಕಲಿತು, ರೋಗಗಳನ್ನು ತಡೆಗಟ್ಟಿ ಆರ್ಥಿಕ ಬೆಳವಣಿಗೆಯನ್ನುಂಟುಮಾಡುತ್ತದೆ.

ಇದಾದ ನಂತರ ಇನ್ನೂ ಅನೇಕ ಇಂತಹ ಯೋಜನೆಗಳನ್ನು ಕೈಗೊಂಡು, ಅದಕ್ಕೆ ಬೇಕಾದ ಜನ ಮತ್ತು ಸಾಮಾನುಗಳನ್ನು ಅಮೇರಿಕವು ಒದಗಿಸುವುದು. ಸಮೂಹ ವಿಕಾಸವು ಎಲ್ಲ ದೃಷ್ಟಿಯಿಂದಾಗಬೇಕೆಂಬುದೇ ಉದ್ದೇಶ.

ಸಮೂಹ ಸೇವಕರನ್ನು ತರಬೇತು ಮಾಡುವುದು, ಮುಖ್ಯವಾದ ನೀರಾವರಿ ಯೋಜನೆಗಳಿಗೆ ಸಹಾಯ ಮಾಡುವುದು, ಟ್ಯೂಬ್ ವೆಲ್‌ಗಳನ್ನು ತೋಡುವುದು, ಒಳ್ಳೆಯ ಗೊಬ್ಬರವನ್ನು ತರಿಸುವುದು, ಕಬ್ಬಿಣ ಮತ್ತು ಉಕ್ಕನ್ನು ತರಿಸಿ ಕೊಡುವುದು, ಚಿಟ್ಟೆ ಹುಳಗಳನ್ನು ವಿನಾಶ ಮಾಡುವುದು, ನೆಲದ ಸಾರವನ್ನು ಅಂದಾಜು ಮಾಡುವುದು, ಮಲೇರಿಯ ರೋಗ ನಿವಾರಣೆ, ಅರಣ್ಯ ಸಂಪತ್ತಿನ ಸಂಶೋಧನೆಗೆ ಸಹಾಯ, ವಿಮಾನ ಕೈಗಾರಿಕೆಗೆ ಸಹಾಯ, ಇವೇ ಮುಂತಾದ ಮುಖ್ಯ ಯೋಜನೆಗಳಿಗೆ ಭಾರತವು ಅಮೇರಿಕದಿಂದ ಸಹಾಯ ಪಡೆಯುತ್ತದೆ.

ಸಮೂಜ (ವಯಸ್ಕರ) ಶಿಕ್ಷಣ ಯೋಜನೆ ಮತ್ತು ಸೆಂಟ್ರಲ್ ಹೈಸ್ಕೂಲು ವಿದ್ಯಾರ್ಥಿಗಳು.

(ವಿದ್ಯಾ ಇಲಾಖೆಯಿಂದ)

ಈ ಯೋಜನೆಯು ಆಶ್ರಯದಲ್ಲಿ ಸಮೂಜದ ರಚನಾತ್ಮಕ ಕೆಲಸಗಳಿಗೆ ತುಂಬಾ ಅವಕಾಶಗಳನ್ನು ಕಲ್ಪಿಸಿಕೊಂಡಿದೆ. ಕೈಗೊಳ್ಳುವ ಅನೇಕ ಕೆಲಸಗಳಲ್ಲಿ ರೈತರಿಗೆ ವ್ಯವಸಾಯ ಕಾರ್ಯಗಳಲ್ಲಿ ಸಹಾಯ ಮಾಡುವುದು ಒಂದು ಮುಖ್ಯ ಕಾರ್ಯ. ಇದರಿಂದ ರೈತರಿಗೂ ಹಾಗೂ ವಿದ್ಯಾರ್ಥಿಗಳಿಗೂ ತುಂಬಾ ಪ್ರಯೋಜನವಿದೆ ಎಂಬುದನ್ನು ಸಾರ್ವಜನಿಕರಿಗೆ ವಿವರಿಸುವ ಅಗತ್ಯವಿಲ್ಲ. ರಚನಾತ್ಮಕ ಕೆಲಸಗಳಲ್ಲಿ ವಿದ್ಯಾರ್ಥಿಗಳ ಪಾತ್ರವು ಬಹು ಪ್ರಾಮುಖ್ಯವಾದುದು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಮುಖ್ಯೋಧ್ಯಾಯರ ಪ್ರೋತ್ಸಾಹದ ಮೇರೆಗೆ ವಿದ್ಯಾರ್ಥಿಗಳ ಒಂದು ಪಂಗಡವು ಅದೇ ಶಾಲೆಯ ಸ್ಕೌಟ್ ಮಾಸ್ಟರೂ ವಯಸ್ಕರ ಶಿಕ್ಷಣದ ಆಶ್ರಯದಲ್ಲಿ ತಾರೀಕು ೩–೮–೫೪ರಲ್ಲಿ ಕಳಕೇರಿ ನಿಡುಗಣಿ ಗ್ರಾಮಕ್ಕೆ ಬೇಸಾಯ ಕೆಲಸದಲ್ಲಿ ಸಹಾಯಕ್ಕೆ ಹೋಗಿದ್ದರು.

ಕಾರ್ಯಕ್ರಮ

ಪೂರ್ವ ಸಿದ್ಧತೆ—ಸೆಂಟ್ರಲ್ ಹೈಸ್ಕೂಲು ಸ್ಕೌಟು ಮಾಸ್ಟರು ಮತ್ತು ವಯಸ್ಕರ ಶಿಕ್ಷಣದ ಅಗರ್ನೈಜರೂ ಕಳಕೇರಿ ನಿಡುಗಣಿ ಗ್ರಾಮದ ಪಟೇಲರನ್ನು ನಾಲ್ಕು ದಿನ ಮುಂದಾಗಿ ಕಂಡು, ಅವರು ಹೋಗುವ ವಿಚಾರವನ್ನು ತಿಳಿಸಿ ಸಿದ್ಧತೆ ನಡೆಸಲು ಸೂಚಿಸಿದರಾಗಿ ಬರುವೆವೆಂಬುದಾಗಿ ತಿಳಿಸಲಾಯಿತು. ಅಂತೆಯೇ ಇರುವ ವಿದ್ಯಾರ್ಥಿಗಳಿಗೂ ತಿಳುವಳಿಕೆ ಕೊಡಲಾಯಿತು.

ಪ್ರವಾಸ—೩–೮–೫೪ರಲ್ಲಿ ಎಲ್ಲರೂ ಬೆಳಿಗ್ಗೆ ೮–೩೦ ಗಂಟೆಗೆ ಹೈಸ್ಕೂಲು ಬಳಿ ಸೇರಿ ೯ ಗಂಟೆಗೆ ಪ್ರಯಾಣ ಬೆಳೆಸಿದರು. ಗಂಟೆ ೧೦ಕ್ಕೆ ಕೆಲಸ ಮಾಡಬೇಕೆಂದಿದ್ದ ಗದ್ದೆಯ ಬಳಿ ತಲಪಿದರು. ಹೋದವರಲ್ಲಿ ೬ ಮಂದಿ ನುರಿತ ನಾಟಿ ಕೆಲಸಗಾರರು. ಉಳಿದವರು ಅಗೆ ತಂದು ಕೊಡುವುದರ ಜೊತೆಗೆ, ನಾಟಿ ನೆಡಲು ಅಭ್ಯಾಸಿಸಿದರು. ಶ್ರೀಗೆಳೆಯರಾದ ಎಸ್. ಎಂ. ಈರಪ್ಪ, ಬೊಳ್ಳೇರ ಮೂಚಯ್ಯ ಮತ್ತು ಐಯ್ಯಪ್ಪ, ಇವರುಗಳ ಗದ್ದೆ ನಾಟಿ ಕೆಲಸ ಮಾಡಲಾಯಿತು. ಈ ಮೂವರ ಗದ್ದೆ ಅಂದಾಜು ೪೦ ಬಟ್ಟಿ ಬೂಗು ವಷ್ಟು ವಿದ್ಯಾರ್ಥಿಗಳು ನಾಟಿ ಕೆಲಸ ಮಾಡಿದರು. ಸಮಯವನ್ನು ವ್ಯರ್ಥ ಮಾಡದೆ ನಾಲ್ಕು ಗಂಟೆಯವರೆಗೂ ಕೆಲಸ ಮಾಡಿ, ಐದು ಗಂಟೆಗೆ ವಾಪಸು ಹಿಂತಿರುಗಿದೆವು.

ಪಂಗಡವು ಗಮನದಲ್ಲಿಟ್ಟ ಮುಖ್ಯಾಂಶಗಳು—ಮಾತಿನಿಂದಾಗಲೀ ಇನ್ನಾವ ರೀತಿಯಿಂದಾಗಲೀ ಸಹಾಯ ಕ್ಕೆಂದು ಹೋಗುವವರಿಂದ ರೈತರಿಗೆ ತೊಂದರೆಯಾಗದಂತೆ ಮುಂಜಾಗ್ರತೆ ವಹಿಸಲಾಗಿತ್ತು. ಮಧ್ಯಾಹ್ನದ ಫಲಹಾರವನ್ನು ವಿದ್ಯಾರ್ಥಿಗಳೇ ತೆಗೆದುಕೊಂಡು ಹೋಗಿದ್ದರು. ಈಗಿನ ವಿದ್ಯಾಭ್ಯಾಸ ಕ್ರಮ ಸರಿಯಲ್ಲ. ಸರಿಯಲ್ಲದ ಕ್ರಮದಲ್ಲಿ ತರಬೇತಾದ ವಿದ್ಯಾರ್ಥಿಗಳ ವಿಚಾರದಲ್ಲಿ ಇದ್ದ ತಪ್ಪು ತಿಳುವಳಿಕೆ ಮಾಯವಾಗಿ ಗೌನೆಯಿಂದ ಪದವಿನೆಯಂತಹ ವಿದ್ಯಾರ್ಥಿಗಳು ತಿಳಿದಿದ್ದಾರೆಂಬುದಾಗಿ ಗ್ರಾಮಾಂತರದವರು ತಿಳಿಯುತ್ತಾರೆ. ಇತ್ತ ವಿದ್ಯಾರ್ಥಿಗಳು ಜನರ ಜೀವನವನ್ನು ಅರಿತು ಅವರ ಕಷ್ಟ ಸುಖಗಳಲ್ಲಿ ಭಾಗಿಗಳಾಗುತ್ತಾರೆ. ಒಂದೊಂದು ದಿನವು ಪ್ರಚಾರಕ್ಕಾಗಿಯಾಗಲೀ ಅಥವಾ ಹೊಗಳಿಕೆಗಾಗಲೀ ಬಲಿಯಾಗದೆ, ಕ್ರಿಯಾತ್ಮಕವಾಗಿ ಮಾಡಿ ತಮ್ಮ ಪಾಲಿನ ಸೇವೆಯನ್ನು ಮಾಡಲೇಬೇಕೆಂಬ ಅರಿವನ್ನು ವಿದ್ಯಾರ್ಥಿಗಳು ಮನಗಾಣುವರು. ಇಂಥಾ ಸಂದರ್ಭಗಳು ಹಿರಿಯರು ಕಿರಿಯರಿಗೆ ಕಲ್ಪಿಸಿಕೊಡುವುದೂ ಕರ್ತವ್ಯವಾಗಿದೆ.

ಆಕ್ರಮಣವನ್ನೆದುರಿಸಲು ಸಿದ್ಧವಾಗಿರಬೇಕು.

ಭಾರತಕ್ಕೆ ಆಕ್ರಮಣವನ್ನು ಮಾಡಬೇಕೆಂಬ ಇಚ್ಛೆ ಇಲ್ಲದಿದ್ದರೂ ಎನ್ನಿಂದಾದರೂ ಅದರ ಮೇಲೆ ಆಕ್ರಮಣವಾದಲ್ಲಿ ಅದನ್ನು ಎದುರಿಸಲು ಭಾರತವು ಸಿದ್ಧವಾಗಿರಬೇಕೆಂದು ಭಾರತದ ಸಂರಕ್ಷಣಾ ಮಂತ್ರಿ ಶ್ರೀ ಗೋಪಾಲಸ್ವಾಮಿ ಐಯ್ಯಂಗಾರರು ಭಾರತದ ಸೇನೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ಹೇಳಿದರು. "ದೇಶದ ಪ್ರಗತಿಯಾಗಬೇಕಾದರೆ ರಾಷ್ಟ್ರವು ಸುರಕ್ಷಿತವಾಗಿರಬೇಕು. ಜೊತೆಯಲ್ಲೇ ಜನರ ಆರ್ಥಿಕ ಉನ್ನತಿಯೂ ಆಗಬೇಕು ಎಂದರು. ಕಳೆದ ಐದು ವರ್ಷಗಳಲ್ಲಿ ಸೈನಿಕರೂ, ವಿಮಾನ ನೌಕಾ ಪಡೆಯವರೂ ಮಾಡಿದ ಕಾರ್ಯವನ್ನು ಅವರು ಕೊಂಡಾಡಿದರು.

ಶ್ರೀಮತಿ ದುರ್ಗಾಬಾಯಿ ಇವರಿಗೆ ಕಾರ್ಯದರ್ಶಿ ಪದವಿ

ಯೋಜನಾ ಆಯೋಗದ ಸದಸ್ಯೆಯಾದ ಶ್ರೀಮತಿ ದುರ್ಗಾಬಾಯಿಯವರನ್ನು ಸಾರ್ವಜನಿಕ ಸಹಕಾರದ ರಾಷ್ಟ್ರೀಯ ಸಲಹಾ ಸಮಿತಿಯ ಕಾರ್ಯದರ್ಶಿಯಾಗಿ ಆರಿಸಲಾಗಿದೆಯೆಂದು ಪತ್ರಿಕಾ ಪ್ರಕಟಣೆಯೊಂದರಿಂದ ತಿಳಿದು ಬರುತ್ತದೆ. ಪ್ರಧಾನಿ ನೆಹರೂರವರು ಈ ಯೋಜನಾ ಆಯೋಗದ ಅಧ್ಯಕ್ಷರು.

ಅಮೇರಿಕದ ವಿದ್ಯಾರ್ಥಿಗಳ ಸಂಪಾದನೆ

ಮೂರನೆಯ ಒಂದು ಭಾಗದಷ್ಟು ಕಾಲೇಜು ವಿದ್ಯಾರ್ಥಿಗಳು ಅಮೇರಿಕದಲ್ಲಿ ತಮ್ಮ ಶಿಕ್ಷಣವನ್ನು ಕಲಸ ಮಾಡಿ ಸಂಪಾದಿಸಿ ತಮ್ಮ ಖರ್ಚನ್ನು ಕಳೆದುಕೊಳ್ಳುವರು.

ವಷ್ಟೋಕ್ ವಿಶ್ವವಿದ್ಯಾನಿಲಯದಲ್ಲಿ ನಿಕೋಲಸ್ ಜೇವರ್ಸ್ ಪೆರಿಲಾ ಎಂಬ ವಿದ್ಯಾರ್ಥಿ ಇದ್ದಾನೆ. ಈತ ಶಬ್ಬಲಿ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತ ಪದವೀಧರನಾದ ಸಿಕೋಲಾಸನು, ಕಾಲೇಜಿನಲ್ಲಿ ಪ್ರಥಮ ಶ್ರೇಣಿಯಲ್ಲಿಯೇ ತೇರ್ಗಡೆಯಾದ. ಈ ವರ್ಷ ಆತನಿಗೆ ಫ್ರಾನ್ಸಿನ ವಿಶ್ವವಿದ್ಯಾನಿಲಯವೊಂದರಲ್ಲಿ ಓದಲು ಮೊದಲು ಫುಲ್‌ಬ್ರೈಟ್ ವಿದ್ಯಾರ್ಥಿವೇತನ ಕೊಡಲಾಗಿದೆ.

ನಿಕೋಲಾಸನಂತೆ ಇತರ ವಿದ್ಯಾರ್ಥಿಗಳೂ ಸಂಪಾದಿಸಿ ವಿದ್ಯೆ ಕಲಿಯುತ್ತಾರೆ. ಕಾಲೇಜು ಪುಸ್ತಕ ಭಂಡಾರಗಳಲ್ಲಿಯೋ, ಗುಮಾಸ್ತರಾಗಿಯೋ, ಅಥವಾ ಜಲಸಂಪತ್ಕಮಂದಿರಗಳಲ್ಲಿಯೋ ಕಲಸ ಮಾಡಿ ಹಣ ಸಂಪಾದಿಸುತ್ತಾರೆ. ವಿದ್ಯಾರ್ಥಿಗಳಿಗೆ ಕಲಸ ಕೊಡಲು ಅನೇಕ ಲಾಭಿ ಕೊಡುವ ಕಛೇರಿಗಳು ಕಾಲೇಜುಗಳಲ್ಲಿವೆ. ನಿಕೋಲಾಸ ಮತ್ತು ಇತರ ಸಾವಿರಾರು ವಿದ್ಯಾರ್ಥಿಗಳು ತಮ್ಮ ಕಾಲೇಜು ಅಭ್ಯಾಸವನ್ನು ಈ ರೀತಿಯಲ್ಲಿ ಮುಗಿಸುತ್ತಾರೆ. ಇದೊಂದು ಅಮೇರಿಕದ ವಿದ್ಯಾರ್ಥಿ ಜೀವನದ ವೈಶಿಷ್ಟ್ಯ.

ಮಿಡಿತೆಗಳ ಹಾವಳಿ ತಡೆಯಲು

ಭಾರತ ಸರಕಾರವು ರೂಪಾಯಿ ೨೧,೩೮,೦೦೦ ಗಳನ್ನು ಮಂಜೂರು ಮಾಡಿದೆ. ಪಂಜಾಬು, ಪೆಪ್ಸು, ರಾಜಸ್ಥಾನ, ಕಚ್, ಸೌರಾಷ್ಟ್ರ ಮತ್ತು ಮುಂಬಯಿ ಈ ಕಡೆಗಳಲ್ಲಿ ಸುಮಾರು ೬೬,೬೦ ಚದರ ಮೈಲು ವಿಸ್ತೀರ್ಣದ ಸ್ಥಳೆಗಳಲ್ಲಿ ಮಿಡಿತೆಗಳನ್ನು ನಿರೋಧಿಸುವ ಕಾರ್ಯಕ್ರಮ ಕೈಗೊಳ್ಳಲಾಗುವುದು. ವಿಮಾನಗಳು ಮತ್ತು ಮೋಟಾರು ವಾಹನಗಳ ಮೂಲಕವೂ ಈ 'ಯುದ್ಧ' ನಡೆವುದು.

ಭಾರತದಲ್ಲಿ ತಂಬಾಕು

ತಂಬಾಕು, ವಿದೇಶೀ ಸಂಪರ್ಕದಿಂದ ಹೊರತು, ಧೂಮಪಾನದ ಪಂಚಯವನ್ನು ಕೊಟ್ಟು, ಇಂದು ಲಕ್ಷೋಪಲಕ್ಷ ಜನರಿಂದ ಹೊಗೆ ಕಾರಿಸುತ್ತಿರುವ ವಸ್ತು. ಇದರ ಉಪಯೋಗವೂ ಹೆಚ್ಚುತ್ತಿದೆ, ಅದಕ್ಕೆ ತಕ್ಕಂತೆ, ಉತ್ಪಾದನೆಯೂ ಅಧಿಕವಾಗುತ್ತಿದೆ. ವ್ಯಾಪಾರೀ ಬೆಳಗಳಲ್ಲಿ ಇದೂ ಒಂದು.

ವಿಭಜನಾ ನಂತರ ಭಾರತದಲ್ಲಿ ತಂಬಾಕಿನ ಖರ್ಚು ಒಂದೇ ಸವನೆ ಹೆಚ್ಚಿದೆ. ೧೯೫೧ ನೆ ವರ್ಷದಲ್ಲಿ, ೧೫೫೦ ಕ್ಕಿಂತ ಭಾಗ,೦೦೦ ಟನ್ನುಗಳಷ್ಟು ಹೆಚ್ಚಿಗೆ ತಂಬಾಕು ಬೇರೆ ಬೇರೆ ರೂಪದಲ್ಲಿ ಖರ್ಚಾಗಿದೆ

ಕಳೆದ ಮೂರು ವರ್ಷಗಳಲ್ಲಿ ಭಾರತವು ಅಮದುಕ್ಕಾಗಿ ೧,೬೦ ೦೦೦, ೨,೦೪ ೦೦೦ ಮತ್ತು ೨,೧೯,೦೦೦ ಟನ್ನುಗಳಷ್ಟು ತಂಬಾಕನ್ನು ಅಂತರಿಕವಾಗಿ ಉಪಯೋಗಿಸಿದೆ. ಭಾರತದಲ್ಲಿ ತಂಬಾಕು ಹಲವು ಬೇರೆ ಬೇರೆ ರೂಪಗಳಲ್ಲಿ ಉಪಯೋಗಿಸಲ್ಪಡುತ್ತದೆ. ಮುಖ್ಯವಾಗಿ ವಿಳ್ಯದೊಂದಿಗೆ ತಿನ್ನುವಾಗ, ಸಿಗರೇಟ್, ಬೀಡಿ, ಮತ್ತು ಚುಟ್ಟಾಗಳ ರೂಪದಲ್ಲಿ ಸೇದಲು, ಇನ್ನು ಹುಕ್ಕಾ ಮತ್ತು ನಶ್ಯಗಳ ರೂಪದಲ್ಲಿ ಹೀಗೆಲ್ಲಾ ಅದನ್ನು ಬಳಸುತ್ತಾರೆ.

ಭಾರತದಲ್ಲಿ ಸಿಗರೇಟ್ ತಯಾರಿಸುವ ೧೦ ದೊಡ್ಡ ಕಾರ್ಖಾನೆಗಳಿವೆ. ಅಲ್ಲಿ ವರ್ಷಕ್ಕೆ ಸುಮಾರು ೪,೫೦,೦೦.೦೦೦ ರಾಷ್ಟ್ರುಗಳಷ್ಟು ಕಚ್ಚಾ ತಂಬಾಕು ಖರ್ಚಾಗುತ್ತದೆ. ಇನ್ನು ವರ್ಷಂಪ್ರತಿ ಸುಮಾರು ೯೩,೩೩,೫೫,೦೦೦ ರೂಪಾಯಿಯುಷ್ಟು ಮೌಲ್ಯದ ೧,೨೬,೬೬,೬೦,೦೦'೦೦೦ ಬೀಡಿಗಳು ಈ ದೇಶದಲ್ಲಿ ತಯಾರಾಗುತ್ತವೆ.

ಕಚ್ಚಾ ತಂಬಾಕನ್ನು ಭಾರತವು ವಿದೇಶಗಳಿಗೆ ರಫ್ತು ಮಾಡುವುದಲ್ಲದೆ ಸಿಗರೇಟ್ ಮತ್ತು ಚುಟ್ಟಾಗಳನ್ನು ವಿದೇಶಗಳಿಂದ ಇಲ್ಲಿಗೆ ಆಮದು ಮಾಡಿಕೊಳ್ಳುತ್ತದೆ. ಕಳೆದ ವರ್ಷ ೧೦೧೪,೯೦೧ ರೂಪಾಯಿ ಮೌಲ್ಯದ ೬೯'೩೨೨ ರಾತ್ತುಗಳಷ್ಟು ಸಿಗರೇಟುಗಳು ಮತ್ತು ರೂ.೧,೨೧,೨೬೭ ರೂಪಾಯಿ ಮೌಲ್ಯದ ೧೧'೫೭೨ ರಾತ್ತುಗಳ ಚುಟ್ಟಾಗಳೂ ಪರರಾಷ್ಟ್ರಗಳಿಂದ ಇಲ್ಲಿಗೆ ಆಮದಾಗಿದೆ.

ಪೊಲೀಸ್ ಅಧಿಕಾರಿಯ ಮನೆಯಿಂದ ಕಳವು

ತಿರುನೆಲ್ವೆಲ್ಲಿ ಜಿಲ್ಲೆಯ ಶಂಕರನ್ ಕೊಯಿಲ್ ಎಂಬಲ್ಲಿ ತಾ. ೧೩ ರಾತ್ರಿ ಕೆಲವು ಧಕಾಯಿತರು ಪೊ|| ಅ|| ಸಬರಂಟಿಂಡೆಂಟರಾದ ಮಿ. ಎಸ್. ಎಂ. ಡಾಯಸರ ಮನೆಗೆ ಹೊಕ್ಕಿ ಅಲ್ಲಿಂದ ಸುಮಾರು ಐದು ಸಾವಿರ ರೂಪಾಯಿ ಬೆಲೆ ಬಾಳುವ ವಸ್ತುಗಳನ್ನು ಹಿಡಿಯಾಳಿನ ಬೆಡಿರಿ ಹಾಕಿ ಜೋಚಿಕೊಂಡು ಪರಾರಿಯಾದರು. ಪೊಲೀಸರು ಈ ಕಾರಿತು ವಿಚಾರಣೆ ನಡೆಸುತ್ತಿರುವರು.

ಲಿಯೊಖಿತ್ ಕೊಲೆ ವರದಿ ಪ್ರಕಟಿಸಿರಿ.

'ನನ್ನ ತಂದೆಯ ಕೊಲೆಯ ವರದಿಯನ್ನು ಪ್ರಕಟಿಸಿರಿ' ಎಂದು ಪಾಕಿಸ್ತಾನ ಸರಕಾರವನ್ನು ಪಾಕಿಸ್ತಾನದ ಮೊಜಿಮ್ ಮಂತ್ರಿ ಲಿಯಾಕತ್ ಅಲಿಖಾನರ ಹಿರೀ ಮಗನಾದ ವಿಲಾಯತ್ ಅಲಿ ಖಾನರು ಕೇಳಿಕೊಂಡಿರುವರು. ಕರಾಚಿಯಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ನಿರಾಶ್ರಿತರಿಗಾಗಿ ಏನೂ ಮಾಡದ ನಿರಾಶ್ರಿತರ ಮಂತ್ರಿ ಡಾ. ಕುರೇಶಿಯವರನ್ನು ನಿವೃತ್ತಗೊಳಿಸಬೇಕೆಂದು ಕೇಳಿಕೊಂಡರು.

ಸಾದಿಕ್ ಸಹಾಬ್ ಎಂಬ ಕರುಣಾ ವ್ಯಾಪಾರಸ್ಥರು ಮಾತನಾಡುತ್ತಾ, ನಜೀಮುದ್ದೀನ್ ಮಂತ್ರಿಮಂಡಳವು ಒಡಕುಗಳಿಂದ ಕೂಡಿದ್ದಾಗಿರುವದೆಂದೂ ಬೇಗನೆ ಅದರಲ್ಲಿ ಬದಲಾವಣೆಗಳಾಗಬಹುದೆಂದೂ ಹೇಳಿದರು.

ಕಾಂಗ್ರೆಸ್ ಒಂದು ಪಕ್ಷವಲ್ಲ, ರಾಷ್ಟ್ರವಾಗಿದೆ.

"ನಾನು ಕಾಂಗ್ರೆಸ್ಸನ್ನು ಸಂಸ್ಥೆ ಎಂದು ಎಣಿಸುವದಿಲ್ಲ; ಅದು ರಾಷ್ಟ್ರವೇ ಆಗಿದೆ. ಜನರ ಬೆಂಬಲ ಮತ್ತು ಸಹಾಯ ದೇಶಕಾಗಿರುವ ದನದಂತೆ ಕಾಂಗ್ರೆಸಿದೆ. ಅದಕ್ಕೆ ಸರಿಯಾಗಿ ತಿನ್ನಲು ಕೊಟ್ಟಲ್ಲಿ ಒಳ್ಳೆಯ ಹಾಲು ಸಿಗಬಹುದೆಂದು ಮುದ್ರಾಸಿನ ಪ್ರಧಾನಿ ಶ್ರೀ ರಾಜಗೋಪಾಲಾಚಾರ್ಯರು ಸ್ವಾತಂತ್ರ್ಯೋತ್ಸವದ ನಿಮಿತ್ತ ಸೇರಿದ್ದ ಸಭೆಯಲ್ಲಿ ಹೇಳಿದರು.

ಭೂದಾನ ಯಜ್ಞಕ್ಕೆ ಪ್ರಜಾ ಪಕ್ಷದ ಮುಖಂಡರ ಸಹಾಯ

ಮಧ್ಯ ಪ್ರದೇಶ ಎಸೆಂಬ್ಲಿಯ ವಿರೋಧ ಪಕ್ಷದ ಮುಂಖಡರೂ ಆದ ಠಾಕೂರ್ ಪ್ಯಾರೆಲಾಲ್ ಸಿಂಗರವರು ವಿಂಹಾಕೋಸಲದ ಜಿಲ್ಲೆಗಳಲ್ಲಿ ಕಾಲ್ನಡಿಗೆಯಲ್ಲಿ ಪ್ರವಾಸ ಮಾಡಿ ಭೂದಾನ ಯಜ್ಞ ಯಶಸ್ವಿಯಾಗಲು ತಮ್ಮ ಸೇವೆ ಸಲ್ಲಿಸಲಿದ್ದಾರೆ. ದಸರಾ ಆದ ಮೇಲೆ ಅವರು ಈ ಪ್ರವಾಸ ಆರಂಭಿಸುವರು.

ಜ|| ನಗೀಬರ ಹೇಳಿಕೆ

ಸೈನ್ಯಗಳ ಸುಪ್ರೀಂ ಕಮಾಂಡರಾಗಿ ಈ ಜಿಪ್ಟನ್ ಅರಸರಿಗಿರುವ ಪರಿಮಿತಿಯೊಳಗೇ ಇಟ್ಟಿರುವುದಾಗಿ ಕಮಾಂಡರ್-ಇನ್-ಚೀಫ್ ಜ|| ನಗೀಬ್ ಈ ದಿನ ತಿಳಿಸಿದರು.

ಇದುವರೆಗೆ ಸ್ವಾರ್ಥಸಕ್ತವಾಗಿದ್ದ ಪಕ್ಷಗಳ ಅರಸರು ಸೈನ್ಯದ ವಿಚಾರಗಳಲ್ಲಿ ಕೈಹಾಕಿದರೂ ಸುವ್ಯವಸ್ಥಿತರೆಂದೂ ಇನ್ನು ಮುಂದೆ ಅಂಥ ಪ್ರಕರಣಗಳಿಗೆ ಅವಕಾಶ ಕೊಡುವುದಿಲ್ಲವೆಂದೂ ಜ|| ನಗೀಬ್ ಹೇಳಿದರು.

ಬಲತ್ಕಾರ ಸೈನ್ಯದಾಖಲಾತಿ ಕಾನೂನು ಎಲ್ಲ ಜನರಿಗೂ ಅನ್ವಯವಾಗುವಂತೆ ಮಾಡಲಾಗುವುದೆಂದು ಜನರಲ್ ನಗೀಬ್ ಹೇಳಿದರು.

ಈಗ ಸೈನ್ಯದ ಪ್ರಥಮ ಮತ್ತು ಪ್ರಮುಖ ಕರ್ತವ್ಯವೆಂದರೆ ಶಾಂತಿ ಮತ್ತು ಭದ್ರತೆಗಳನ್ನು ಕಾಪಾಡುವುದೇ ಆಗಿದೆ ಎಂದೂ ಅವರು ಹೇಳಿದರು.

ಬ್ರಿಟನ್ನಿಗೆ ಪಂಡಿತ ನೆಹ್ರೂ ಸಂದೇಶ

ಸ್ವಾತಂತ್ರ್ಯ ಬಂದಂದಿನಿಂದ ಭಾರತೀಯರು ಶಾಂತಿ ಪಥದಲ್ಲೇ ನಡೆಯಲು ಪ್ರಯತ್ನಿಸುತ್ತಿದ್ದಾರೆ. ಅವರ ಪ್ರಯತ್ನದಲ್ಲಿ ಬ್ರಿಟನ್ನಿನ ಜನತೆಯ ಸಹಕಾರವನ್ನು ಅವರು ನಿರೀಕ್ಷಿಸುತ್ತಾರೆ, ಎಂದು ಪ್ರಧಾನಿ ನೆಹರೂ ಬ್ರಿಟನ್ನಿನ ಜನತೆಗೆ ಮತ್ತು ಬ್ರಿಟನ್ನಿನಲ್ಲಿರುವ ಭಾರತೀಯರಿಗೆ ಕೊಟ್ಟ ಸಂದೇಶದಲ್ಲಿ ತಿಳಿಸಿದ್ದಾರೆ.

ಈ ಸಂದೇಶವನ್ನು ಭಾರತದ ಹೈಕಮಿಷನರ್, ಶ್ರೀ ಬಿ. ಜಿ. ಖೇರರು "ಭಾರತ ಭವನ" ದಲ್ಲಿ ನಡೆದ ಸನ್ಮಾನಂಧದಲ್ಲಿ ಓದಿದರು.

"ಪ್ರಪಂಚದ ಇತರ ಭಾಗಗಳಂತೆಯೇ ನಮ್ಮ ಮುಂದೆಯೂ ಅನೇಕ ಸಮಸ್ಯೆಗಳಿವೆ. ಇವುಗಳನ್ನೆಲ್ಲ ಶಾಂತಿಯುತವಾಗಿ, ರಚನಾತ್ಮಕವಾಗಿ ಮತ್ತು ಸಹಕಾರ ಮಾರ್ಗದಿಂದ, ಸದುದ್ದೇಶಗಳನ್ನು ಸಮಾರ್ಗಗಳಿಂದಲೇ ಸಾಧಿಸುವ ಪ್ರಯತ್ನದಿಂದ ಪರಿಹರಿಸಿಕೊಳ್ಳುವುದು ಸಾಧ್ಯ" ಎಂದು ನೆಹ್ರೂ ತಿಳಿಸಿದ್ದಾರೆ.

ವಾರ್ತೆ.

ಅಂತರರಾಷ್ಟ್ರೀಯ ರೆಡ್ ಕ್ರಾಸಿನ ಮಂಡಿನ ಹರಿಪತ್ರು ೧೯೫೨ರಲ್ಲಿ ಭಾರತದಲ್ಲಿ ಸೇರಲಿದೆ.

ಪಾಶ್ಚೀಯವೆನಿಸಿದ ಚಹಾ-ಕಾಫಿಗಳನ್ನು ಮೂರನೆಯ ಅಂಗಡಿ ಆಹಾರ ಮೂರನೆಯ ಅಂಗಡಿಯಲ್ಲವೆಂದೂ ಬೊಂಬಾಯಿ ಪ್ರೆಸಿಡೆನ್ಸಿ ಹೋಟೆಲ್ ಮ್ಯಾಜಸ್ಟೇಟರು ತೀರ್ಮಾನವಿತ್ತಿದ್ದಾರೆ.

ವಿರ್ ಇಂಡಿಯಾ ಮತ್ತು ವೆರ್ಸ್ಟರ್ ರ್ ನ್ಯಾಷನಲ್ ವಿಮಾನ ಪ್ರಯಾಣ ಸರ್ವಿಸ್‌ಗಳನ್ನೆಲ್ಲಾ ೧೬-೪-೫೨ ರಿಂದ ಅನಿರ್ದಿಷ್ಟ ಕಾಲದವರೆಗೆ ನಿಲ್ಲಿಸಲಾಗಿದೆ. ಸಂತಾಕ್ರೂಜ್ ನಿಲ್ದಾಣದಲ್ಲಿರುವ ಈ ಸರ್ವಿಸಿನ ಉದ್ಯೋಗಿಗಳು ಮುಷ್ಕರ ಹೂಡಿರುವುದರಿಂದಲೇ ಈ ಕ್ರಮ.

ಬೊಂಬಾಯಿ, ಮದ್ರಾಸ್, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಸರಕಾರಗಳು ತಮ್ಮ ಅಭಿವೃದ್ಧಿ ಯೋಜನೆಗಳಿಗೆ ಹಣ ಒದಗಿಸಲು ಕೇಳಿದ್ದ ಒಟ್ಟು ೧೬|| ಕೋಟಿ ರೂ. ಗಳ ಸಾಲವು ಪೂರ್ತಿಯಾಗಿದ್ದು ಸಂಗ್ರಹ ಕಾರ್ಯ ಮುಕ್ತಾಯವಾಗಿದೆಯೆಂದು ಹಿಂದೂಸ್ಥಾನ ರಿಸರ್ವ್ ಬ್ಯಾಂಕು ಪ್ರಕಟಿಸಿದೆ.

ತುಳಸಿದಾಸ, ವೀರಾಬಾಯಿ, ಸೂರದಾಸ, ಕಬೀರ, ಗರೀಬ ಮತ್ತು ರವೀಂದ್ರನಾಥ ಠಾಕೂರ ಈ ಆರು ಜನ ಸಾಧು ಸಂತರ ಹಾಗೂ ಕವಿಗಳ ಭಾವಚಿತ್ರಗಳುಳ್ಳ ಆಂಚೆ ತಿಕೀಟುಗಳನ್ನು ಗಾಂಧಿ ಜಯಂತಿಯ ವಾರದಲ್ಲಿ ಅಕ್ಟೋಬರ್ ೧ ನೇ ದಿನ ಪ್ರಸಾರ ಮಾಡಬೇಕೆಂದು ಆಂಚೆ ತಿಕೀಟುಗಳ ಸಲಹಾ ಶಾಸ್ತ್ರಿ ಸಲಹೆ ಮಂಡಳವು ಸೂಚಿಸಿದೆ.

'ಪ್ರೇವ ಮಾಪಕ' ಯಂತ್ರವೊಂದು ತಯಾರಾಗಿದೆ. ಅದರ ಮೇಲೆ ನಿಂತು ಉಮೇದ್ವಾರರು ವಧುವರರು ಮುತ್ತಿಟ್ಟು ಕೊಂಡರೆ ಅವರ ದಾಂಪತ್ಯ ಸಾಮರಸ್ಯವಾಗುವದೋ ಇಲ್ಲವೊ ಎಂದೂ ಅದು ಹೇಳುವದಂತೆ. ಇದರಿಂದ ಜಾತಕ ನೋಡುವ ಜೋಯಿಸರು ಗಾಬರಿಯಾಗಿದ್ದಾರೆ. ಈಗಾಗಲೇ ತರುಣ ತರುಣಿಯರು ಜಾತಕ ನೋಡುವ ಪದ್ಧತಿ ಬೇಡವೆಂದೂ ಈ ಯಂತ್ರ ಹೊಸಲಕ ಘಟನೆ ನೋಡಬೇಕೆಂದೂ ಚಳವಳಿ ಹೂಡುವವಿದ್ದಾರೆ. ಆಗಲೇ ಮದುವೆಯಾಗಿ ಬಿಟ್ಟವರು ಪಶ್ಚಾತ್ತಾಪ ಪಡತೊಡಗಿದ್ದಾರೆ.

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ಕೊಡಗು

ತಾ. ೨೨-೮-೧೯೪೮ನೇ ಶುಕ್ರವಾರ

ಭಾರತ-ಕಾಶ್ಮೀರ.

ಕಾಶ್ಮೀರದ ಸಮಸ್ಯೆಯು ಕಳೆದ ಐದು ಪರ್ವಗಳಿಂದ ವಿಶ್ವ ಸಂಸ್ಥೆಯ ಮುಂದಿದ್ದು ಇನ್ನೂ ಬಗೆಹರಿದಿರುವುದಿಲ್ಲ. ಇದರ ವಿಚಾರ ಇನ್ನು ಜಿನೇವಾದಲ್ಲಿ ವಿಶ್ವಸಂಸ್ಥೆಯ ಪ್ರತಿನಿಧಿಯಿಂದ ಬೇಗನೆ ನಡಿಸಲ್ಪಡಲಿರುವುದು. ಈ ವಿಚಾರಕ್ಕೆ ಇಂಡಿಯೂ ಮತ್ತು ಪಾಕಿಸ್ಥಾನವು ಸಹಕರಿಸಲು ಒಪ್ಪಿರುವವು. ಇಪ್ಪರಲ್ಲಿ ಪಾಕಿಸ್ಥಾನದ ಪ್ರಧಾನ ಮಂತ್ರಿಗಳು 'ಸ್ವಾತಂತ್ರ್ಯ ದಿನಾಚರಣೆಯಲ್ಲಿ 'ತಾವು ಭಾಷೆ ಇತ್ತಂತೆ ಕಾಶ್ಮೀರವನ್ನು ಸಂಪೂರ್ಣ ಸ್ವತಂತ್ರ ಮಾಡದೆ ವಿಶ್ರಮಿಸೆವು' ಎಂದು ಹೇಳಿರುವರು. ಕಾಶ್ಮೀರದ ಪ್ರಶ್ನೆಯು ವಿಶ್ವಸಂಸ್ಥೆಯ ವಿಚಾರದಲ್ಲಿರುವಾಗ್ಗೆ ಈ ಉದ್ಗಾರದ ಉದ್ದೇಶವೇನೆಂದು ಗೊತ್ತಾಗುವುದಿಲ್ಲ. ಇನ್ನೊಂದೆಡೆ ಪಾಕಿಸ್ಥಾನದ ಮುಖ್ಯಸ್ಥರೊಬ್ಬರು ಈ ಸಮಸ್ಯೆಯು ಬೇಗನೆ ಬಗೆಹರಿಯದೆ ಹೋದ ಪಕ್ಷ ಮತಯುದ್ಧವನ್ನು ಹೂಡಬೇಕಾಗುವ ದೆಂದಿರುವರು. ಈ ರೀತಿಯ ಬೆದರಿಕೆಯ ಮಾತುಗಳಿಂದ ಶಾಂತಿಯುಕ್ತವಾದ ಶೀರ್ಮನಕ್ಕೆ ಎಂದೂ ಸಹಾಯ ಮಾಡಿದಂತಾಗುವುದಿಲ್ಲ.

ಈ ಮಧ್ಯೆ ಇಂಡಿಯೂ ಸರ್ಕಾರದೊಂಗೆ ಕಾಶ್ಮೀರದ ಮುಖ್ಯ ಮಂತ್ರಿಯಾದ ಶೇಕ್ ಅಬ್ದುಲ್ಲಾ ಕವರು ಕಾಶ್ಮೀರಕ್ಕೂ ಭಾರತಕ್ಕೂ ಇರಬೇಕಾದ ಸಂಬಂಧವನ್ನು ಕುರಿತು ಒಂದು ಒಪ್ಪಂದವನ್ನು ಮಾಡಿಕೊಂಡಿರುವರು. ಈ ಒಪ್ಪಂದದ ಮೇರೆ ಕಾಶ್ಮೀರದ ಜನರ ಪ್ರಜಾಸತ್ತಾತ್ಮಕ ಆಶೋತ್ತರಗಳ ಬಗ್ಗೆ ಭಾರತವು ಸಂಪೂರ್ಣ ಬೆಂಬಲ ಕೊಡುವುದೆಂದು ಅವರು ಕಾಶ್ಮೀರದ ಘಟನಾಸಭೆಯಲ್ಲಿ ಸ್ಪಷ್ಟಪಡಿಸಿದರು. ಅಲ್ಲದೆ ಭಾರತದ ಮತ್ತು ಕಾಶ್ಮೀರದ ಸಂಬಂಧವು ಶಾಶ್ವತವಾಗಿ ಇರಬೇಕಾದರೆ ಮತ್ತು ಕಾಶ್ಮೀರದ ಸ್ವಾತಂತ್ರ್ಯವು ಭದ್ರವಾದ ಅಡಿಗಲ್ಲಿನ ಮೇಲೆ ನಿಲ್ಲಬೇಕಾದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯರ ಮತ್ತು ಕಾಶ್ಮೀರದವರ ನಡುವಿನಲ್ಲಿದ್ದ ಜಾತ್ಯತೀತ ಪ್ರಜಾಸತ್ತಾತ್ಮಕ ಘಟನೆಯು ಇವೆರಡು ದೇಶಗಳಲ್ಲಿಯೂ ಒಂದೇ ಆಗಿರಬೇಕೆಂದರು. ಅಬ್ದುಲ್ಲಾರವರ ಈ ವರ್ತನೆಯಿಂದ ಇವೆರಡು ದೇಶಗಳ ಸಂಬಂಧವು ಗಟ್ಟಿಯಾಗುವಂತೆ ತೋರುತ್ತದೆ.

ಕಾಶ್ಮೀರವು, ಇಂಡಿಯಾಕ್ಕೆ ಸ್ವಾತಂತ್ರ್ಯ ದೊರೆತಂದಿನಿಂದ ಈ ಐದು ವರ್ಷಗಳ ವರೆಗೆ ಪಟ್ಟ ಕಷ್ಟನಷ್ಟಗಳನ್ನು ಲಕ್ಷಿಸಿ, ಪಂಡಿತ ನೆಹರೂರವರ ಸರ್ಕಾರವು ಅವರಿಗೆ ಇತರ 'ಬಿ' ಸಂಸ್ಥಾನಗಳಿಗಿಂತ ಸ್ವಲ್ಪ ಹೆಚ್ಚಿನ ರಿಯಾಯಿತಿ ತೋರಿಸಲು ಕಾರಣವಾಗಿದೆ. ಆದರೆ ಇದನ್ನು ಉಪಯೋಗಿಸಿಕೊಂಡು, ಕಾಶ್ಮೀರವು ತನ್ನದೇ ಸ್ವತಂತ್ರ ಧ್ವಜವಿರಬೇಕು. ಸರ್ವ ಸ್ವತಂತ್ರ ಅಧ್ಯಕ್ಷನಿರಬೇಕೆಂದು ವಾದಿಸುವುದು ಎಂದೂ ಸರಿಯಲ್ಲ. ಕಾಶ್ಮೀರವು ಮುಂದಕ್ಕೆ ರಾಜಕೀಯ ಮತ್ತು ಆರ್ಥಿಕ ದೃಷ್ಟಿಯಲ್ಲಿ ಅಭಿವೃದ್ಧಿಗೊಳ್ಳಬೇಕಾದರೆ ಕಾಶ್ಮೀರ-ಭಾರತದ ಸಂಬಂಧವು ಹೆಚ್ಚು ಬಲಗೊಳ್ಳಬೇಕು. ಕಾಶ್ಮೀರದ ಘಟನಾಸಭೆಯು ಈ ವಿಚಾರಕ್ಕೆ ಹೆಚ್ಚಿನ ಗಮನ ಕೊಡುವದೆಂದು ನಂಬಲಾಗಿದೆ

ಮಡಿಕೇರಿ.

ಕಳೆದ ತಾ. ೧೦ರಲ್ಲಿ ಶ್ರೀ ಕಂಜಿತಂಡ ಪೊನ್ನಪ್ಪನವರು ಮಡಿಕೇರಿ ಆಸ್ಪತ್ರೆಯಲ್ಲಿ ಶಿವಾಧೀನರಾದರೆಂದು ತಿಳಿಯುತ್ತೇವೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿನ ಮೇನೇಜರಾಗಿ ಸೀನಿಯರ್ ಸಹಕಾರಿ ಇನ್ಸ್‌ಪೆಕ್ಟರರಾದ ಶ್ರೀ ಜಿ. ಯನ್. ತಿಮ್ಮಪ್ಪಯ್ಯನವರು ನೇಮಿಸಲ್ಪಟ್ಟಿರವರು.

ಈ ತಾ. ೧೫ ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ ೧೧ ಇಂಚು ೯೬ ಸೆಂಟು ಮಳೆಯಾಗಿದೆ. ಹೆಚ್ಚಾಗಿ ಮಳೆಯಾದ ನಿನ್ನೆ ದಿನ ೨ ಇಂಚು ೭೬ ಸೆಂಟು ಬಿದ್ದಿದೆ.

ಬರುವ ಸೆಪ್ಟಂಬರ್ ತಿಂಗಳು ೨೦ರಲ್ಲಿ ನಡೆಯಲಿಕ್ಕಿರುವ ವಿರಾಜಪೇಟೆ ಮುನ್ಸಿಪಲ್ ಕಮಿಟಿಯ ಚುನಾವಣೆಗೆ ಉಮೇದ್ವಾರರು ನೇಮಕ ಪತ್ರಗಳನ್ನು ಈ ತಾ. ೨೬ರ ಒಳಗೆ ಕೊಡಬೇಕೆಂದು ಪ್ರಕಟವಾಗಿದೆ.

ಅಸಿಸ್ಟೆಂಟ್ ಕಮಿಷನರು ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಶ್ರೀ ಐ. ಸಿ. ಸುಬ್ಬಯ್ಯನವರು ಕೊಡಗು ಸರಕಾರದ ಪರವಾಗಿ ಕಾಫಿ ಬೋರ್ಡಿನ ಮೆಂಬರರಾಗಿ ನೇಮಿಸಲ್ಪಟ್ಟಿರುವರು

ಕೈಲ್‌ಮೂಹೂರ್ತ, ದಸರಾ ಮತ್ತು ಕ್ರಿಸ್‌ಮಸ್ ಹಬ್ಬಗಳಿಗೆ ಅರ್ಜಿ ಬರಕೊಂಡ ಕೂಪನ್‌ದಾರರಿಗೆ ಒಂದೊಂದು ಕುಪ್ಪಿ ಸಾರಾಯಿ ಹೆಚ್ಚಿಗೆ ಕೊಡುವುದಾಗಿ ಪ್ರಕಟವಾಗಿದೆ.

ರಾಯಲಸೀಮೆ ಕ್ಷಾಮ ನಿವಾರಣಾ ಫಂಡಿಗೆ ಕೊಡಗಿನಿಂದ ಈ ತಾ. ೨೦ರ ವರೆಗೆ ರೂ ೯,೪೬೧-೭-೩ ಜಮೆಯಾಗಿದೆ. ಇದರ ವಿವರವು ಇನ್ನೊಂದು ವಾರ ಕೊಡಲ್ಪಡುವುದು.

ತಿತಿಮತಿಯಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ 'ಮನೆಯಪಂಡ ನಾಚಯ್ಯ ನೀಲಮ್ಮ' ಶಾಲಾ ಕಟ್ಟಡವನ್ನು ಜಿ|| ಕೆ. ಯಂ. ಕಾರ್ಯಪ್ಪನವರು ಈತಾ. ೨೫ರಲ್ಲಿ ಚೀಫ್ ಕಮಿಷನರ್ ಲೆ. ಕ. ಬೇಡಿಯವರ ಅಧ್ಯಕ್ಷತೆಯಲ್ಲಿ ತೆರೆಯುವರಾಗಿ ತಿಳಿಯಬರುತ್ತದೆ.

ಮದ್ರಾಸ್ ಪ್ರಾಂತ್ಯದಲ್ಲಿ ಕೆಲವು ವರ್ಷಗಳ ವರೆಗೆ ಲಾಯರು ವೃತ್ತಿಯಲ್ಲಿ ಅನುಭವ ಪಡೆದು ೧೦ ವರ್ಷ ಜಿಲ್ಲಾ ಮುನ್ಸಿಫರಾಗಿ ಉದ್ಯೋಗ ನಡೆಸಿದ ಶ್ರೀ ಐ. ಬಾಲಸುಬ್ರಮಣ್ಯಂ ಬಿ. ಎ., ಬಿ. ಎಲ್. ಇವರು ಮಡಿಕೇರಿಯಲ್ಲಿ ಲಾಯರು ವೃತ್ತಿಯನ್ನು ಪ್ರಾರಂಭಿಸಿರುವರು.

ಕೆಲವು ದಿವಸಗಳ ಹಿಂದೆ ಮಡಿಕೇರಿ ನಾಡು ಅರುವತೊಕ್ಲು ಗ್ರಾಮದ ಶ್ರೀ ಮುಂಜಾಂದಿರ ಕಾಯಪ್ಪನವರು ಸದರಿ ಮನೆ ಗಣಪತ್ತಿಯವರಿಗೂ ಮತ್ತು ಚಾತ್ರನ ಪೂವಯ್ಯನವರಿಗೂ ಗುಂಡಿಕ್ಕಿ ಕೊಂದರೆಂಬ ಖೂನಿಕೇಸು ಮಡಿಕೇರಿ ಸೆಶನ್ ಕೋರ್ಟಿನಲ್ಲಿ ವಿಚಾರವಾಗಿ ಶ್ರೀ ಕಾರ್ಯಪ್ಪನವರಿಗೆ ಪಾಸಿ ಶಿಕ್ಷೆಯು ವಿಧಿಸಲಾಗಿದೆಯೆಂದು ತಿಳಿಯಬರುತ್ತದೆ.

ಮಡಿಕೇರಿ ಮುನಿಸಿಪಲ್ ಕಛೇರಿಯಲ್ಲಿ ಗೃಹಮಂತ್ರಿಯವರಾದ ಶ್ರೀ. ಕೆ. ಮಲ್ಲಪ್ಪನವರ ರಾಜಿನಾಮೆಯಿಂದ ಉಂಟಾದ ಖಾಲಿ ಸ್ಥಳಕ್ಕೆ ಈ ತಾ. ೧೯ರಲ್ಲಿ ಚುನಾವಣೆ ನಡೆದು ಸ್ಪರ್ಧಿಸಿದ ಮೂರು ಉಮೇದ್ವಾರರುಗಳಾದ ಶ್ರೀ ಡಿ. ಯಸ್. ದೇವಶೆಟ್ಟಿಯವರು, ಡಾ ಯಂ. ಬಿ. ಕಾರ್ಯಪ್ಪನವರು ಮತ್ತು ಬಿ. ಯಸ್. ತಿಮ್ಮಪ್ಪರೈ ಪೈಕಿ ಶ್ರೀ ಡಿ ಯಸ್ ದೇವಶೆಟ್ಟಿಯವರು ಜಯಶೀಲರಾಗಿರುವರೆಂದು ತಿಳಿಯ ಬರುತ್ತದೆ.

'ಉತ್ತರ ಕೊಡಗು ತಾಲೂಕು ಫ್ರೀ ಜರುಪೇಟೆ ಹೋಬಳಿ ರಸೂಲ್‌ಪುರ(ಬಾಳುಗೋಡು) ಗ್ರಾಮದಲ್ಲಿ, (೧) ಬಿಳಿವರ್ಣದ ಒಂದು ದೊಡ್ಡ ಕೋಣ, (೨) ಬಿಳಿವರ್ಣದ ಸ್ವಲ್ಪ ಕೂಡು ಕೋಡಿನ ಒಂದು ಸಣ್ಣ ಎಮ್ಮೆ (೩) ಕರಿವರ್ಣದ ಒಂದು ಸಣ್ಣ ಕೋಣ ಅಂತು ಮೂರು ರಾಸುಗಳು ಕೆಲವು ದಿನಗಳಿಂದ ಈ ಗ್ರಾಮದಲ್ಲಿವೆ. ನಿಜವಾದ ಮೂಲೀಕರು ಬಂದು ಹೊಡೆದು ಕೊಂಡು ಹೋಗಬಹುದಾಗಿ ಸದ್ರಿ ಗ್ರಾಮದ ಪಟೇಲರು ಯನ್. ಯಂ. ನಂಜಪ್ಪನವರು ತಿಳಿಸುತ್ತಾರೆ.

ಸ್ವಾತಂತ್ರ್ಯ ದಿನಾಚರಣೆ.

ಮಡಿಕೇರಿ

ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿ ಆಚರಿಸಿದಂತೆ ಕೊಡಗಿನ ಹಲವು ಭಾಗಗಳಲ್ಲಿಯೂ ತಾ ೧೫ರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನಡೆಸಲ್ಪಟ್ಟಿತು. ಆ ದಿನ ಬೆಳಿಗ್ಗೆ ಎಂಟೂವರೆ ಗಂಟೆಗೆ ಗೃಹ ಮಂತ್ರಿಯಾದ ಶ್ರೀ ಕೆ. ಮಲ್ಲಪ್ಪನವರಿಂದ ಮೂರ್ಕೇಟ್ಟಿನ ಬಳಿಯೂ, ೧೧ ಗಂಟೆಗೆ ಕೋಟೆಯಲ್ಲಿ ಮುಖ್ಯ ಮಂತ್ರಿಯಾದ ಶ್ರೀ ಸಿ. ಎಂ. ಪೂಣಚ್ಚನವರಿಂದಲೂ ಧ್ವಜಾರೋಹಣವು ಮಾಡಲ್ಪಟ್ಟಿತು. ಮಳೆಯ ದೆಸೆಯಿಂದ ಆಟೋಟಗಳು ನಡೆಯಲಿಲ್ಲ. ಸಾಯಂಕಾಲ ೩ ಗಂಟೆಗೆ ಕಾವೇರಿ ಮಹಲಿನಲ್ಲಿ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮಕ್ಕಳೂರಿನ ಶ್ರೀ ರಾಮಚಂದ್ರರಾಯರು ಮತ್ತು ಶ್ರೀ ನಾರಾಯಣರಾಯರು ಭಾಷಣಗಳನ್ನು ಮಾಡಿದರು. ಅಧ್ಯಕ್ಷರ ಭಾಷಣದಿಂದ ಸಭೆ ಮುಕ್ತಾಯವಾಯಿತು.

ವೀರಾಜಪೇಟೆ

ಈ ದಿನ ಬೆಳಿಗ್ಗೆ ೧೧ ಗಂಟೆಗೆ ತಾಲೂಕು ಕಛೇರಿ ಮೈದಾನದಲ್ಲಿ ಎಸೆಂಬ್ಲಿಯ ಸ್ವೀಕರಾದ ಶ್ರೀ ಬಿ. ಎಸ್. ಕುಶಾಲಪ್ಪನವರಿಂದ ಧ್ವಜಾರೋಹಣ ಮಾಡಲಾಯಿತು. ಕೂಡಲೆ ಸದರಿಯವರ ಅಧ್ಯಕ್ಷತೆಯಲ್ಲಿ ನಡೆದ ವಿಠಂಗಿನಲ್ಲಿ ಮುಂಗಳೂರಿನ ಶ್ರೀಗಳಾದ ನಾರಾಣಯಣರಾಯರು ಮತ್ತು ರಾಮಚಂದ್ರರಾಯರು ಭಾಷಣವನ್ನಿತ್ತರು.

ಸೋಮವಾರಪೇಟೆ

ಬೆಳಿಗ್ಗೆ ೬|| ಗಂಟೆಗೆ ಹೈಸ್ಕೂಲು ಹೆಡ್ ಮಾಸ್ಟರಾದ ಶ್ರೀ ಬಿ. ಎಸ್. ಕೆ. ವಿಟ್ಠಲರಾಯರಿಂದ ಧ್ವಜಾರೋಹಣವು ನಡೆಸಲ್ಪಟ್ಟು, ಶಾಲಾ ಮಕ್ಕಳು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೋದ ಮೇಲೆ ಶ್ರೀ ವಿಟ್ಠಲರಾಯರ ಅಧ್ಯಕ್ಷತೆಯಲ್ಲಿ ವಿಠಂಗನ್ನು ನಡೆಸಿ, ಭಾಷಣಗಳಾದವು.

ಹಾತೂರು.

ಹಾತೂರಿನಲ್ಲಿ ಬೆಳಿಗ್ಗೆ ೯-೩೦ ಗಂಟೆಗೆ ಧ್ವಜಾರೋಹಣವನ್ನು ಮಾಡಿ ಶ್ರೀ. ಯಂ. ಡಬ್ಲು. ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಆಟೋಟ ಮೆರವಣಿಗೆ ಮೊದಲಾದುವುಗಳಿಂದ ಸ್ವಾತಂತ್ರ್ಯ ದಿನವು ಆಚರಿಸಲ್ಪಟ್ಟಿತು.

ಶ್ರೀಮಂಗಲ.

ಶ್ರೀಮಂಗಲದಲ್ಲಿ ಧ್ವಜಾರೋಹಣವಾದ ಮೇಲೆ ಜೈ ಹಿಂದ್ ವಾಚನಾಲಯದಲ್ಲಿ ಶ್ರೀ. ಯಂ. ಬಿ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭಾಷಣಗಳು ಮಾಡಲ್ಪಟ್ಟವು.

ಬಿ. ಶೆಟ್ಟಿಗೇರಿ.

ಬಿ. ಶೆಟ್ಟಗೇರಿಯಲ್ಲಿ ಬೆಳಿಗ್ಗೆ ೧೧ ಗಂಟೆಗೆ ಧ್ವಜಾರೋಹಣವಾದ ನಂತರ ಶ್ರೀ. ಕೆ. ಜಿ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ವಿಠಂಗು ನಡೆಸಲಾಯಿತು.

ಹೆಬ್ಬಾಲೆ.

ಹೆಬ್ಬಾಲೆ ಶಾಲೆ ಬಳಿ ಬೆಳಿಗ್ಗೆ ೮-೩೦ ಗಂಟೆಗೆ ಧ್ವಜಾರೋಹಣ ಮಾಡಲಾಯಿತು ನಂತರ ಶ್ರೀ. ಲಕ್ಕಯ್ಯ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭಾಷಣಗಳು ಮಾಡಲ್ಪಟ್ಟವು.

ನಾಪೋಕ್ಲು.

ಧ್ವಜಾರೋಹಣವಾದ ಮೇಲೆ ನಾಪೋಕ್ಲು ಹೈಸ್ಕೂಲು ಹಾಲಿನಲ್ಲಿ ಹೆಡ್ ಮಾಸ್ಟರಾದ ಪಿ. ಎನ್. ದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ, ಈ ದಿನದ ಪ್ರಾಮುಖ್ಯತೆಯನ್ನು ಕುರಿತು ಕೆಲವರು ಭಾಷಣ ಮಾಡಿದರು.

ಕಣ್ಣಂಗಾಲ.

ಇಲ್ಲಿಯ ಶಾಲೆಯ ಬಳಿ ಬೆಳಿಗ್ಗೆ ೮ ಗಂಟೆಗೆ ಗ್ರಾಮಸ್ಥರು ಸೇರಿ ಧ್ವಜಾರೋಹಣ ಮಾಡಿದ ಮೇಲೆ ಶ್ರೀ. ಮಚ್ಚಂಡ ಎಸ್. ಅಯ್ಯಪ್ಪನವರ ಅಧ್ಯಕ್ಷತೆಯಲ್ಲಿ ವಿಠಂಗು ನಡೆಸಲಾಯಿತು.

ಅಮ್ಮತ್ತಿ

ಈ ದಿನ ಬೆಳಿಗ್ಗೆ ೯ ಗಂಟೆಗೆ ಅಮ್ಮತ್ತಿ ಶಾಲೆಯ ಮೈದಾನದಲ್ಲಿ ಮುಖ್ಯ ಮಂತ್ರಿಯಾದ ಶ್ರೀ ಸಿ. ಯಂ. ಪೂಣಚ್ಚನವರಿಂದ ಧ್ವಜಾರೋಹಣ ಮಾಡಲಾಯಿತು. ನಂತರ ಶಾಲಾ ಮಕ್ಕಳಿಗೆ ಆಟೋಟಗಳನ್ನು ನಡೆಸಿ ಶಾಲಾ ಹಾಲಿನಲ್ಲಿ ಶ್ರೀ ಪಿ. ಯಸ್. ಈರಪ್ಪನವರ ಅಧ್ಯಕ್ಷತೆಯಲ್ಲಿ ವಿಠಂಗು ನಡೆಸಲಾಯಿತು.

ಇತರ ಸ್ಥಳಗಳು.

ಇದೇ ರೀತಿಯಲ್ಲಿ ಸಿದ್ದಾಪುರದಲ್ಲಿ ಶ್ರೀ ತೋಟಂಬೈಲು ಮೂದಪ್ಪನವರ ಅಧ್ಯಕ್ಷತೆಯಲ್ಲೂ, ಪೊಳ್ಬಟ್ಟದಲ್ಲಿ ಶ್ರೀ ಎ. ಎಸ್. ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲೂ, ಶನಿವಾರಸಂತೆಯಲ್ಲಿ ಶ್ರೀ ಆರ್. ಕೆ. ದೇವಪ್ಪನವರ ಅಧ್ಯಕ್ಷತೆಯಲ್ಲೂ ಮತ್ತು ತಿತಿಮತಿಯಲ್ಲಿ ಶ್ರೀ ಚೋನಿರ ಮೂದಪ್ಪನವರ ಅಧ್ಯಕ್ಷತೆಯಲ್ಲೂ ಸ್ವಾತಂತ್ರ್ಯ ದಿನಾಚರಣೆಯು ನಡಿಸಲ್ಪಟ್ಟಿತು.

ಮುಜ್ರಾಯಿ ಇಲಾಖೆಯ ಕಾರ್ಯಕಲಾಪಗಳು.

ಕೊಡಗು ಮುಜ್ರಾಯಿ ಇಲಾಖೆಯ ಕಾರ್ಯಕಲಾಪಗಳನ್ನೂ, ಇದರ ಸಾಹಯ್ಯಕ್ಕೆ ಅಪಿತವಾದ ದೇವಸ್ಥಾನಗಳಲ್ಲಿ ಈಗ ನಡೆಯುತ್ತಿರುವ ಪೂಜೆ ಪುಶಸ್ಕಾರಗಳನ್ನೂ ಕುರಿತು ಕಳೆದ ವರ್ಷ ನಾವು ಎರಡು ಪಾತ್ರಿಗಳನ್ನು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ್ದೆವು. 'ಕೊಡಗು' ದೇಶದಲ್ಲಿ ಕಾಲಕ್ಕೆ ಸರಿಯಾಗಿ ಮಳೆ ಬೆಳೆಗಳಾಗದೆ, ಆಗಿಂದಾಗ್ಗೆ ಅತಿವೃಷ್ಟಿ, ಅನಾವೃಷ್ಟಿಗಳಾಗುತ್ತಿದ್ದಹನ್ನು ನೋಡಿ ಇದೇಕಾದರೂ ದೈವ ಕೋಪದಿಂದಂಟಾಗಿರಬಹುದೇ ಎಂದು ಶಂಕಿಸಿ ಅದನ್ನು ನಿವಾರಿಸಿದರೆ, ದೇಶಕ್ಕೆ ಕಲ್ಯಾಣವಾಗಬಹುದೆಂಬ, ಹಿತದೃಷ್ಟಿಯಿಂದ ನಾನು ಅವುಗಳನ್ನು ಬರೆದು ಪ್ರಕಟಿಸಿದುದಲ್ಲದೆ, ಅದಕ್ಕೆ ಉತ್ತರ ಕೊಟ್ಟ 'ಓರ್ವ ಭಕ್ತ'ರೆಂದು ಪತ್ರಿಕೆಯಲ್ಲಿ ಪ್ರಕಟಿಸಿದವರು ತಾ. ೨೧-೪-೫೧ ರಲ್ಲಿ ಪ್ರಕಟಿಸಿದ ಅವರ ಉತ್ತರದ ಮೇರೆ ದೇವಸ್ಥಾನದ ಕಮಿಟಿಯವರನ್ನೂ, ಪೈಸಿಡೆಂಟರನ್ನೂ ಹಿಯಾಳಿಸಲಿಕ್ಕಾಗಲೀ, ಹೂ ಅವರನ್ನು 'ಪಾನಮನೆಗೆ ಹೋಗಿ ಭಿಕ್ಷಾಟನೆ ಮಾಡಿ' ಎಂದು ಹೇಳುವುದಕ್ಕಾಗಲಿ, ಯಾ 'ಪತ್ರಿಕೆಗಳ ಪುಟಶಃ ಬೀಳಲಿಕ್ಕಾಗಲೀ ಬರೆದುದಲ್ಲ. ಅದೂ ಅಲ್ಲದೆ, ದೇವಸ್ಥಾನದ ಪೂಜಾಕಾರ್ಯಗಳ ಪರ ವಕಾಲತ್ತು ವಹಿಸಿಕೊಂಡು ಅವರನ್ನು ಮುಸ್ಕರ ಹಿಡಿಸಿ ಅವರ ಸಂಬಳ ಹೆಚ್ಚಿಸಬೇಕೆಂಬ ಅಭಿಲಾಷೆಯೂ ನನಗಿರಲಿಲ್ಲ.

ಸಂಗತಿಯು ಹೀಗಿದ್ದರೂ ಸಹ ಮೊನ್ನೆ ನಾವೂರು ಶಂಕರನಾರಾಯಣ ದೇವಸ್ಥಾನದ 'ಭಕ್ತರಿಗೆ' ಇನ್ನೊಂದು ಸಿಟ್ಟು ಬರಲು ಕಾರಣವಾದರೂ ಏನು? ಇವನ್ನು ಬರೆದವರು ನಿಜವಾಗಿಯೂ 'ಓರ್ವ ಭಕ್ತರೊ' ಅಲ್ಲ, ಪ್ರಸಿಡೆಂಟರೂ, ಮತ್ತು ಕಮಿಟಿ ಮೆಂಬರರೇ ಬರೆದು, ಈ ಕರದ ವಿಶ್ವಸನೀಯ ಹಾಕಿದರೆ ಈ ಪಾತ್ರಿಯನ್ನು ಕೂಲಂಕುಶವಾಗಿ ಓದಿದವರಿಗೆಲ್ಲಾ ಈ ಗ್ರಂಥಕರ್ತರು 'ಓರ್ವ ಭಕ್ತ'ರಲ್ಲ, ಪ್ರಸಿಡೆಂಟರು ಮತ್ತು ಕಮಿಟಿಯವರ ಪೈಕಿ ಕೆಲವರು ಎಂಬುವುದು ವನದಟ್ಟೆಯೇ ಇರಬೇಕು. ಪ್ರಸಿಡೆಂಟರೂ, ಮತ್ತು ಕಮಿಟಿ ಮೆಂಬರರೂ ಸಹ 'ಭಕ್ತರೇ' ಆದುದರಿಂದ ಇವರು 'ಓರ್ವ ಭಕ್ತ' ಎಂದು ಬರೆದುದರಲ್ಲಿ ತಪ್ಪಿಲ್ಲ, ಅದರೆ, ನಾನು ನನ್ನ ಸಂಪೂರ್ಣ ವಿಳಾಸವನ್ನು ಕೊಟ್ಟಿದ್ದಾಗ್ಯೆ, ಈ ಪ್ರಸಿಡೆಂಟರೂ ಮತ್ತು ಕಮಿಟಿಯವರೂ ಸಹ ತಾವು ಕೊಟ್ಟ ಪ್ರತ್ಯುತ್ತರಕ್ಕೆ ತಮ್ಮ ಉಪಯೋಗದ ಹೆಸರನ್ನು ಕೂಡಬಹುದಿತ್ತು. ಅದರ ಬದಲು ಇವರು ಈ ರೀತಿಯ ಗುಪ್ತನಾಮವನ್ನು ಕೊಟ್ಟದ್ದರಿಂದ, ಇವರು ಕೊಟ್ಟ ಉತ್ತರದಲ್ಲಿ ಇವರಿಗೇ ಅನ್ಯಾಯವಾದ ಬಾಬತ್ತಿಗೆ ಇರಲಿಲ್ಲವೆಂದರ್ಥವಾಗುತ್ತೆ. ಈ ಜವಾಬು ಬರೆದವರು ಪ್ರಸಿಡೆಂಟರೂ ಯಾ ಕಮಿಟಿಯವರು ಎಂಬುದಕ್ಕೆ ಅದರ ಬಾತ್ಮಿಯಿಂದ ಎಕ್ಕಿ ತೆಗೆದ ಇನ್ನೊಂದು ವಾಕ್ಯವೇ ಸಾಕು. '....ಶೀವನ್ನನೆ 'ದೇವಸ್ಥಾನಗಳ ಆಗುಹೋಗುಗಳನ್ನು ೮ರಿಯದೆ, ಖರೆಯವರದರ ಬದಲು, ನೀವು ತಿಳಿಸಿದಂತೆ ನಿಮ್ಮ ಉಡಾಫೆ ಸಹಾಯವನ್ನು ಧಪಸಧಾಕ್ಕದ ಮೂಲಕ ದೇವರ ಸೇವೆಗೆ ಕೊಟ್ಟು, ನೀವು ಮೇಲ್ಪಂಗ್ತಿಯಾಗಿ ಬೇರೆಯವರಿಂದಲೂ ಸಹಾಯ ಬರುವಂತೆ ಮಾಡಿದ್ದರೆ ನಿಮಗೆ ಚಿರಪ್ರಣಿಯಾಗುತ್ತಿದೆವು' ಎಂದು ಬರೆದಿರುವುದರಿಂದ ಚಿರಪ್ರಣಿಗಳಾಗುವವರು ಯಾರು? ಓರ್ವ ಭಕ್ತರೆ? ಅಲ್ಲ ಕವಿಟಿ ಪ್ರಸಿಡೆಂಟರೇ? ಇದೊಂದು ಮಾತಿನಿಂದಲೇ ಇದನ್ನು ಬರೆದವರು ಪ್ರಸಿಡೆಂಟರು ಮತ್ತು ಕೆಲವು ಕವಿಟಿಯವರಲ್ಲದೆ 'ಓರ್ವ ಭಕ್ತ'ರಲ್ಲ ಎಂಬುವುದು ವ್ಯಕ್ತವಾಗುತ್ತದೆ.

ಆ ಉತ್ತರ ಬರೆದವರು ಯಾರೇ ಇರಲಿ. ಅವಕ್ಕೆ ಈಗ ಸುಮಾರು ಒಂದು ವರ್ಷದ ಪರೆಗೆ ಪ್ರತ್ಯುತ್ತರ ಕೊಡದೆ ಈಗ ಈ ಜವಾಬು ಬರೆದದ್ದೇಕೆಂದು ಸದರಿ 'ಭಕ್ತರು' ಪ್ರಶ್ನೆಯನ್ನು ಅಕ್ಷೇಪಿಸಿಯಾರು. ಅದಕ್ಕೆ ನನ್ನ ಜವಾಬು ಇಷ್ಟೆ! ನಾನು ಈ ಮೊದಲು ಬರೆದಿರುವ ಹಾಗೆ ಈ ಬಾತ್ಮಿ ಬರೆದದ್ದು' ಪತ್ರಿಕೆಗಳ ಪುಟ ತುಂಬಿಸುವುದಕ್ಕಾಗಲೀ, ಯಾ ಕವಿಟಿಯವರನ್ನು ಹಿಯಾಳಿಸುವುದಕ್ಕಾಗಲೀ ಅಲ್ಲ. ದೇಶದ ಜನರಲ್ಲಿ ಅನೇಕ ಕಾರಣಗಳಿಂದಾಗಿ ಈಗ ನಿರಾಶ್ರಯಸ್ಥೈರ್ಯವನ್ನು ಕಳೆದಿರುವ ದೈವಭಕ್ತಿಯನ್ನು ಪುನರುಜ್ಜೀವಿಸಿ ಅದನ್ನು ಪೋಷಿಸುವಂತೆ ಮಾಡಲು ನನ್ನ ಅಲ್ಪ ಸೇವೆಯನ್ನು ಸಲ್ಲಿಸಬೇಕೆಂಬ ದೀನದೃಷ್ಟಿಯಿಂದ ಬರೆದದ್ದಾಗಿದೆ. ಆದರೆ ಸದರಿ 'ಭಕ್ತರು' ನಾನು ದೇವಸ್ಥಾನಗಳ ನಿಜವಾದ ಸ್ಥಿತಿಗತಿಗಳನ್ನು, ಅವುಗಳ ಹಾಗು ಹೋಗುಗಳನ್ನು ತಿಳಿಯದೆ ಸದರಿ ಬಾತ್ಮಿಗಳನ್ನು ಬರೆದೆ'ನೆಂದು ಅಕ್ಷೇಪಿಸಿದುದರಿಂದಲೂ, ಮತ್ತು ದೇವಸ್ಥಾನದ ಅಭಿವೃದ್ಧಿಗೋಸುಗ ಕಮಿಟಿ ಮೆಂಬರುಗಳೂ ಪ್ರಸಿಡೆಂಟರೂ ನಾನಾ ಯೋಜನೆಗಳನ್ನು ಕೈಕೊಂಡಿರುವರೆಂದೂ ಬರೆದದರಿಂದ ಇವರ ಅಡಳಿತೆಯ ನಿಜವಾದ ಹಾಗುಹೋಗುಗಳನ್ನು ಕೂಲಂಕುಶವಾಗಿ ಪರಿಶೀಲಿಸುವ ದೃಷ್ಟಿಯಿಂದಲೂ ಮತ್ತು ಇವರು ಕೈಕೊಂಡಿರುವ ರಚನಾತ್ಮಕ ಕೃತ್ಯಗಳನ್ನು ಅಜಮಾಯಿಸುವ ದೃಷ್ಟಿಯಿಂದಲೂ ಈ ವರೆಗೆ ನಾನು ಜವಾಬುಕೊಡಲಿಲ್ಲ. ಈ ಮಧ್ಯೆ ದೇಶದ ಜನರ ಮನಸಿಗೆ ಒಪ್ಪುವಂತ ಯಾವದೊಂದೂ ಬದಲಾವಣೆಯಾಗಲೀ, ಯೋಜನೆಯಾಗಲೀ ಹೊಂಬಿದ್ದದನ್ನು ನಾನು ಕಾಣಲಿಲ್ಲ. ಅದೂ ಅಲ್ಲದೆ, ಈ ಮಧ್ಯೆ ನಾನು ಈ ಕವಿಟಿಯವರ ಕಡಲೆತ ಕೃತ್ಯವನ್ನೂ ದೇವಸ್ಥಾನದಲ್ಲಿ ನಡೆಸುತ್ತಿರುವ ಪೂಜಾ ಕೃತ್ಯಗಳನ್ನೂ ಕೂಲಂಕುಶವಾಗಿ ಅಜಮಾಯಿಸುತ್ತಿದ್ದೆನು. ಇವರ ಅಡಳಿತದ ಸ್ಥಿತಿಯು ಯಾವ ವಿಧದಿಂದಲೂ ಸಂಧಾನಪಲ್ಲಡದರಿಂದಲೂ ಇನ್ನೂ ಪರಿಶೀಲನೆಯಲ್ಲಿ ನಾನಾ ರೀತಿಯ ಭಿನ್ನತೆಗಳು ಕಂಡು ಬಂದದರಿಂದಲೂ ಮತ್ತು ನನ್ನ ಬಾತ್ಮಿಗಳಿಗೆ ಜವಾಬು ಕೊಟ್ಟ 'ಓರ್ವ ಭಕ್ತ'ರು ಅವರ ಸ್ನೇಹಿತರೂ ಆದ ಶ್ರೀ ಅಯ್ಯಪ್ಪನವರನ್ನು ನನ್ನ ಒಂದೇ ಒಂದ ಪ್ರಶ್ನೆಯಿಂದ ಬಾಯಿ ಮುಚ್ಚಿಸಿಬಿಟ್ಟಿದ್ದರಿಂದಲೂ, ನಾನು ಈ ಕಾಲವಿಳಂಬವಾದ ಲೇಖನವನ್ನು ಬರೆದಿದ್ದಾಗಿದೆ.

ಪುರುಷ ಶ್ರೇಷ್ಠರಾದ ಮಹಾತ್ಮಾ ಗಾಂಧಿಯವರು ಅವರ ಜೀವನ ಚರಿತ್ರೆಯಲ್ಲಿ ತಾನು ಮಾಡಿದ ಪ್ರತಿಯೊಂದು ಕೆಲಸಗಳನ್ನೂ ಮುಚ್ಚುಮರೆ ಇಲ್ಲದೆ ಪ್ರಕಟಿಸುತ್ತಿದ್ದುದಲ್ಲದೆ ಕೆಲವೇಳೆ ಅವರು ಮಾಡಿದ ಕೆಲಸ ಅಥವಾ ಹಿಡಿದ ದಾರಿ ತಪ್ಪೆಂದು ಅವರಿಗೆ ಮನದಟ್ಟೆದ ಕೂಡಲೇ ಅಂತಹ ತಪ್ಪನ್ನು ಒಪ್ಪಿ ಕೊಳ್ಳುವುದು ತನ್ನ ತೆರೆಯ ಸ್ನೇಗೂ ಮತ್ತು ಮುಂದಾಳುತನಕ್ಕೂ ಎಂತಹ ಧಕ್ಕೆಯನ್ನು ತರುವಂತಿದ್ದರೂ ಸಹ ಅದನ್ನು ಸ್ವಲ್ಪವೂ ಲೆಕ್ಕಿಸದೆ "ನಾನು ಹಿಮಾಲಯ ಪರ್ವತದಂತಾ ತಪ್ಪನ್ನು ಮಾಡಿಬಿಟ್ಟೆನು" ಎಂಬದಾಗಿ ಒಪ್ಪಿಕೊಳ್ಳುತ್ತಿದ್ದದಲ್ಲದೆ ಅದನ್ನು ಸ್ವಲ್ಪವೂ ಸಂಕೋಚವಿಲ್ಲದೆ ಬಹಿರಂಗವಾಗಿ ಪತ್ರಿಕೆಗಳಲ್ಲಿ ಪ್ರಕಟಿಸಿಯೂ ಬಿಡುತ್ತಿದ್ದರು. ಮಹಾತ್ಮಾಜಿಯವರ ಅದ್ವಿತೀಯ ವ್ಯಕ್ತಿತ್ವಕ್ಕೆ ಅವರ ಅನೇಕ ಗುಣಗಳು ಕಾರಣ ಭೂತಗಳಾಗಿದ್ದರೂ ಅವುಗಳಲ್ಲಿ ಈ ರೀತಿಯಲ್ಲಿ ತಮ್ಮ ತಪ್ಪನ್ನು ಸಂಕೋಚವಿಲ್ಲದೆ ಒಪ್ಪಿಕೊಳ್ಳುತ್ತಿದ್ದ ಗುಣವು ಸಹಜವಾಗಿಯೂ ಅವರಿಗೆ ನಿಜವಾದ ಪ್ರಾಮುಖ್ಯತೆಯನ್ನು ತಂದಿತ್ತಿಂದು ನನ್ನ ಭಾವನೆ.

ಒಂದು ವ್ಯಕ್ತಿಯು ತನ್ನ ಸ್ವಂತ ಕಾರುಬಾರುಗಳಲ್ಲಿ ತಾನು ಮಾಡಬಹುದಾದ ತಪ್ಪುಗಳನ್ನು ಬಹಿರಂಗವಾಗಿ ಒಪ್ಪಿಕೊಳ್ಳುವ ಅವಶ್ಯಕತೆ ಇಲ್ಲದಿದ್ದರೂ ಜನಸಮೂಹದಾಯ ಕಾರ್ಯಕಲಾಪಗಳ ಜವಾಬ್ದಾರಿಕೆಯನ್ನು ಪಹಿಸಿ ಕೊಳ್ಳುವವರು ತಾವು ನಿರ್ವಹಿಸುವ ಸಾರ್ವಜನಿಕ ಕಾರುಬಾರುಗಳಲ್ಲಿ ಸ್ವೇಚ್ಛಾಪ್ರವರ್ತರಾಗಿ ನಡೆಯುವುದಾಗಲಿ, ತಿಳಿದೋ ತಿಳಿಯದೆಯೋ ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳದೆ ಅಧಿಕಾರ ಬಲದಿಂದ ತಾನು ಮಾಡಿದ್ದೇ ಸರಿಯೆಂದು "ಕೆಳಗೆ ಬಿದ್ದರೂ ವಿಸೆ ೯ ನ್ನಾಗಲಿ" ಎಂಬ ರೀತಿಯಲ್ಲಿ ವಾದಿಸುವುದಾಗಲೀ ತೀರ್ಪಲ ಯೋಗ್ಯ ಗುಣಗಳೆಂದು ಹೇಳಲು ಸಾಧ್ಯವಿಲ್ಲ. ಅಂತವರು ತಮ್ಮ ಮುಂದುಮುಂದಣ ತನ್ನಿಂದಿನ ತಾವು ನಡೆಸುತ್ತಿರುವ ಸಂಸ್ಥೆಗೂ ಅದರ ಮೂಲಕ ಜನಸಮುದಾಯಕ್ಕೂ ಕೇಡನ್ನು ತರ್ಕಾರ್ಹ; ಇದು ಅವರ ವೈಕ್ತೀಕ ದೃಷ್ಟಿಯಿಂದಲೂ, ದೇಶದ ಜನರ ಹಿತದೃಷ್ಟಿಯಿಂದಲೂ ಶಮಂಜಸವಾದ ಪಡತೆಯಲ್ಲವೆಂದೂ ಮತ್ತೆ ಹೇಳಬೇಕಾದುದಿಲ್ಲ.

ಮುಜ್ರಾಯಿ ಇಲಾಖೆಯು ಕೂಡ ಒಂದು ಸಾರ್ವಜನಿಕ ಸಂಸ್ಥೆ. ಇದರ ಕಾರ್ಯಕಲಾಪಗಳು ದೇಶದ ಮತ್ತು ಇಡೀ ಜನಾಂಗದ ಹಿತದೃಷ್ಟಿಯಿಂದ ಸರಿಯಾಗಿಯೇ ನಡೆಯಬೇಕು. ಈ ಕಾರ್ಯಕಲಾಪಗಳನ್ನು ನಡೆಸುವ ಜವಾಬ್ದಾರಿಕೆಯು ಒಂದು ವೇಳೆ ವಂಶಪಾರಂಪರ್ಯವಾಗಿ ಈಗಿರುವ ಮೆಂಬರುಗಳ ಮೇಲೆ ಬಿದ್ದಿದ್ದರೆ ಆಗ್ಯೆ ಅವರು ನಾವೇನು ಮಾಡುವುದು? ನಮಗೆ ಈ ಕಾರ್ಯಗಳನ್ನು ಈಗಿನ ಸ್ಥಿತಿಗತಿಗಳಲ್ಲಿ ಶಮಂಜಸವಾಗಿ ನಡೆಸಲು ಶಕ್ತಿ ಇಲ್ಲ ಅದರೆ ಅದನ್ನು ನಿರ್ವಹಿಸದೆ ಬಿಡಲು ವಿಧಿ ಇಲ್ಲ. ಆದುದರಿಂದ ನಾವು ನಮ್ಮಪಾಪ್ತಸ್ಸಿಗೆ ತೃಪ್ತಿ ಪಡುವಂತೆ ನಿಮ್ಮ ಜವಾಬ್ದಾರಿಕೆಯನ್ನು ನಿರ್ವಹಿಸುತ್ತಿದ್ದೇವೆ. ದೇವರೂ ಸಾರ್ವಜನಿಕರೂ ಇದರಿಂದ ತೃಪ್ತರಾಗಿರಬೇಕು. ಇದರಿಂದ ಹೆಚ್ಚು ಮಾಡಲು ನಮ್ಮಿಂದ ಸಾಧ್ಯವಿಲ್ಲ" ಎಂದು ಹೇಳಬಹುದಿತ್ತು.

ಆದರೆ ನಿಜಸ್ಥಿತಿಯು ಹಾಗಲ್ಲ. ಇವೇ ಮುಂದೆ ಬಂದು ನಾವು ಈ ಕಾರುಬಾರುಗಳನ್ನು ಸಮಂಜಸವಾಗಿ ನಡೆಸುತ್ತೇನೆ" ಎನಗೆ ದೇಶಸ್ಥರು ನಿಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ನನಗೆ ಆ ಜವಾಬ್ದಾರಿಕೆಯನ್ನು ವಹಿಸಿಕೊಡಿ ಎಂಬುದಾಗಿ ಮತ ಸಂಗ್ರಹಮಾಡಿ ಉಮೇದುವಾರರಾಗಿ ನಿಂತು ಎದ್ರಿಗಳೊಡನೆ ಪೈಪೋಟಿ ಮಾಡಿ ಬಹು ಮತದಿಂದ ಜುಮ್ಮಾಯಿಸಿ ಬಂದ ಪ್ರತಿನಿಧಿಗಳಾಗಿರುತ್ತಾರೆ. ಈ ಇಲಾಖೆಯು ಸ್ಥಿತಿಗತಿ ಹೇಗಿದೆ. ಈ ಕವಿಟಿಯ ಅಧಿಕಾರಿ ಸ್ವಾತಂತ್ರ್ಯಗಳು ಎಷ್ಟರ ಮಟ್ಟಿಗಿವೆ ಎಂಬುವುದು ಈ ಮುಂದಾಳುಗಳಿಗೆ ಖುಡಿತವಾಗಿಯೂ ಮನನವಂತೆ ಇತ್ತು ಅದರೂ ಅವರು ಸ್ಪರ್ಧಿಸಿ ಜನರ ಓಟು ಪಡೆದು ಶಾಸ್ತ್ರಿ ಕಂಡ ಬಾವಿಗೆ ಹಗಲು ಬಿದ್ದಂತೆ ಜವಾಬ್ದಾರಿಕೆಯನ್ನು ವಹಿಸಿಕೊಂಡ ಪಂತರ ಈಗ ನಾವೇನು ಮಾಡುವುದು ಖರ್ಚಿಗೆ ತಕ್ಕಷ್ಟು ಹಣವಿಲ್ಲ, ನಾವು ಇತ್ತು ಮಾಡಿದರೆವುದು ಸಾಲದವರಿಗೆ ಮನೆ ವನೆ ಭಕ್ತಿ ಬೇಡಬೇಕೇ? ಎಂಬುದಾಗಿ ಬರೆಯುವುದರಲ್ಲಿ ಅರ್ಥವಿಲ್ಲ.

'ಕಾವೇರಿನೂತಿಯು ಮೇಲೆ ಭಕ್ತಿಯೂ, ಪ್ರೀತಿಯೂ ಇರುವವರು ವರ್ಷಕೊಂದಾವೃತ್ತಿ ನಡೆಯುವ ಮಹಾ ಜಾತ್ರೆಗೆ ಯಾರೂ ಕೇಳದೆಯೇ ದಾನ ಮಾಡಬೇಕು. ಕಾವೇರಿಪೇಪರ್ ಮಿಲ್ಸ್, ಕುಗರ್ ಇಂಡಸ್ಟ್ರೀಸ್,....ಮೊದಲಾದ ಅನೇಕ ಕಲಸಗಳಿಗೆ ಪೇಪರುಗಳಲ್ಲಿ ವಿನಂತಿಸಿ ಪ್ರಕಟಿಸಿದ್ದಕ್ಕೆ ಸಾವಿರಗಟ್ಟಿ ಹಣ ಶೇಕರಿಸಿದ್ದು ಶ್ರೀ. ಅಯ್ಯಪ್ಪನವರಿಗೆ ತಿಳಿದಿಲ್ಲವೇ' ಎಂಬದಾಗಿ ಈ ಭಕ್ತರು ಬರೆದಿದ್ದಾರೆ. 'ಭಕ್ತರ' ಈ ಅಭಿಪ್ರಾಯವನ್ನು ಓದಿದವರೆಲ್ಲಾ, ಅವರ ಮನನ್ಸಿನಲ್ಲೇ ವಾಗ್ಯುದ್ಧಕ್ಕೆ ಶಕ್ಯ, ಈ ಪುಣ್ಯಾತ್ಮರಿಗೆ ಸಾಮಾನ್ಯ ಜ್ಞಾನವಾದರೂ ಇರುವುದಿಲ್ಲವೇ ಎಂಬದಾಗಿ ಭಾವಿಸಿರಬಹುದಾಗಿ ನನ್ನ ಭಾವನೆ. ಯಾತಕ್ಕೆಂದರೆ, 'ಕಾವೇರಿ ಪೇಪರ್‌ಮಿಲ್ಸ್, ಕರ್ಗ್ ಟ್ರಾನ್ಸ್‌ಪೋರ್ಟ್' ಇವಕ್ಕೆ ಪೇಪರುಗಳಲ್ಲಿ ಚಂದಾಕೊಡಿ ಎಂದು ಪ್ರಕಟಿಸಿದುದಲ್ಲ ಶೇರ್ ತೆಗೆದು ಕೊಳ್ಳಿ, ಪ್ರತಿ ಶೇರಿಗೆ ಇಷ್ಟು ಲಾಭ ಕೊಡುತ್ತೇವೆಂದು ಪ್ರಕಟಿಸಿದ್ದು ಅಷ್ಟೇ ಅಲ್ಲ, ಹಾಗೆ ಲಾಭಕ್ಕೆ ಕೊಡುವ ಶೇರ್‌ಗಳನ್ನು ಜನರೂಯಿಸಲು ಪೇಪರ್‌ಗಳಲ್ಲಿ ಪ್ರಕಟಿಸಿದುದಲ್ಲದೆ ಏಜಂಟರುಗಳಿಗೆ ಶೇಕಡ ೫ರಿಂದ ೭½ ರೂಪಾಯಿ ವರೆಗೆ ಕಮಿಷನ್ ಕೊಟ್ಟು ಮನೆ ಮನೆಗೆ ಕಳುಹಿಸಿರುತ್ತೇವೆ, ನಿಜಸ್ಥಿತಿಯು ಹೀಗಿರುವಾಗ್ಯೆ, ಧರ್ಮಕಾರ್ಯಕ್ಕೆ ದೇಣಿಗೆಯ ಹಣ ಮತ್ತು ಅಕ್ಕಿಯನ್ನು ಪೇಪರುಗಳಲ್ಲಿ ಒಂದು ವಿಜ್ಞಾಪನೆಯನ್ನು ಹೊರಡಿಸಿ ಮಂಡಿಕೇರಿಯಲ್ಲಿ ಕೂತುಕೊಂಡು ಸಾವಿರಗಟ್ಟಲೆ ಹಣ ಸಂಗ್ರಹಿಸಬಹುದೆಂದು ಗ್ರಹಿಸಿದ ಈ 'ಭಕ್ತರ ಅಭಿಪ್ರಾಯವು ಸ್ವಪ್ನಾವಸ್ಥೆಯ ಗಾಳಿ

ಗೋಪುರವೊ, ಅಲ್ಲ ಪ್ರಸಿಡೆಂಟರು ಮತ್ತು ಕಮಿಟಿ ಮೆಂಬರುಗಳು ಗ್ರಾಮ ಗ್ರಾಮಗಳಿಗೆ ಹೋಗಿ ವೋಟಿಂಗ್ ನಡೆಸಿ, ಕೋಪರೇಟಿವ್ ಸೊಸೈಟಿಗಳ ಮೂಲಕವೂ, ಏಜಂಟರುಗಳ ಮೂಲಕವೂ ಪ್ರಯತ್ನಪಟ್ಟಿದ್ದಾದರೆ, ಗದ್ದೆಗಳಿಗೆ ಏಕ್ರೆಗೆ ೧ ಸೇರಿನಂತೆ ಭತ್ತವನ್ನೂ, ಕಾಫಿ ತೋಟಗಳಿಂದ ಏಕ್ರೆಗೆ ಎರಡಾಣೆಯಂತೆ ಹಣವನ್ನೂ ವಸೂಲಿಮಾಡಬಹುದೆಂದು ನಾನು ಕೊಟ್ಟ ಸಲಹೆಯು ಗಾಳಿಗೋಪುರವೋ ಎಂಬದನ್ನು ದೇಶಸ್ಥರೇ ಊಹಿಸಿಕೊಳ್ಳಲಿ. ಇವರ ತಿಳುವಳಿಕೆ ಬಗ್ಗೆ ನಾನಿಷ್ಟು ಹೇಳುತ್ತೇನೆ. ೧೯೩೫-೩೬ ರಲ್ಲಿ ೧೫ ಲಕ್ಷ ಉತ್ಪತ್ತಿ ಇದ್ದ ನಮ್ಮ ಸರಕಾರದ ಉತ್ಪತ್ತಿಯು ಈ ದಿವಸ ೯೦ ಲಕ್ಷಕ್ಕೆ ಏರಿದೆ. ಕೊಡಗಿನ ವಿಸ್ತೀರ್ಣವು ಆಗಿದ್ದಷ್ಟೇ ಈ ಸಲವೂ ಇದೆ. ಆದರೆ ಈ ಮುಜ್ರಾಯಿ ಇಳಾಖೆಯ ಉತ್ಪತ್ತಿಯು ಹಲವು ವರ್ಷಗಳ ಹಿಂಪೆ ಎಷ್ಟಿತ್ತೋ ಅಷ್ಟೇ ಈಗಲೂ ಇದೆ. ಅದಕ್ಕಿಂತಲೂ ಸ್ಥಿತಿಗತಿಯು ಕೆಳಮಟ್ಟಕ್ಕೆ ಕೆಳಗಿಳಿದಿದೆ ಎಂದರೂ ತಪ್ಪಾಗಲಾರದು. ಸರಕಾರದ ಉದ್ಯೋಗಸ್ಥರು ಈ ಇಲಾಖೆಯ ಕಾರ್ಯಕಲಾಪಗಳನ್ನು ಪರಿಶೀಲಿಸುತ್ತಿರುವಾಗ್ಗೆ ಸುಮಾರು ೧೩ ಸಾವಿರ ರೂಪಾಯಿ ಉಳುವರಿ ಇದ್ದದ್ದು ನನಗೆ ತಿಳಿದುಬಂದಿದೆ.

೮-೧೦ ವರ್ಷಗಳಿಂದ ಪಾಳು ಬಿದ್ದ ದೇವಾಲಯಗಳು ಎಷ್ಟು ಊರ್ಜಿತವಾಗಿವೆ ಎಂದು ನೆನಪಿಟ್ಟಿರಿ' ಎಂಬದಾಗಿ ಈ 'ಭಕ್ತರು' ಬರೆದಿದ್ದಾರೆ ಹಾಗೆ ಈ ಕವಿಟೆಯವರು ಊರ್ಜಿತಪಡಿಸಿದ್ದರಿಂದ ಇವರು ಅಯಾ ದೇವರುಗಳ ಪ್ರೀತಿಗೆ ಪಾತ್ರರಾಗುವುದಲ್ಲದೆ ದೇಶಸ್ಥರ ವಂದನೆಗೂ ಅರ್ಹರಾಗುತ್ತಾರೆ. ಆದರೆ ಹಾಗೆ ಊರ್ಜಿತವಾದ ಎಂಟು ಹತ್ತು ದೇವಸ್ಥಾನಗಳು ಯಾವುವೆಂದು ಅವರು ಬರೆಯಲಿಲ್ಲ.

ದೇವಸ್ಥಾನದ ಉತ್ಪತ್ತಿಯು ಈಗ ಎಲ್ಲಾ ಸಾಮಾನುಗಳಿಗೂ ಕ್ರಯವೇರಿದ ಸ್ಥಿತಿಯಲ್ಲಿ ಬಹಳ ಕಡಿಮೆಯೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ಕವಿಟೆಯವರು ದೇವಸ್ಥಾನಗಳ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಯಾವ ತೊಂದರೆ ತೆಗೆದುಕೊಂಡಿರುತ್ತಾರೆ? ಹಣ ಸಾಲದಿದ್ದರೆ ಸರಕಾರಕ್ಕೆ ಅರ್ಜಿ ಬರೆದುಕೊಳ್ಳಬಹುದು. ಅಂತು ಸರಕಾರದವರು ಇವರ ಕೀಳಿಕೆಯನ್ನು ಫಿರಾಕರಿಸಿದರೆ, ಇವರಿಗೆ ಇಷ್ಟರವರೆಗೆ ಕಂಡ ಒಂದು ದಾರಿ ಎಂದರೆ ಖರ್ಚು ತೋತೆ ಮಾಡುವುದು. ಇನ್ನೆರಡು ದಾರಿಗಳಲ್ಲದೆ ಮೂರನೆಯ ದಾರಿಯೊಂದು ಉತ್ಪತ್ತಿಯನ್ನು ಹೆಚ್ಚಿಸುವ ಪ್ರಯತ್ನಕ್ಕೆ ಇವರು ಕೈ ಹಾಕಿದಂತೆ ಕಂಡು ಬರಲಿಲ್ಲ. ದೇವಸ್ಥಾನದ ಅಡಳಿತೆಗೆ ಒಳಪಟ್ಟ ೭,೭೦೦ ಬಟ್ಟೆ ಭೂಮಿಯಿಂದ ಇರೇ ೨೪೦ ಖಟ್ಟೆ ವರುಷಕ್ಕೆ ಬರುತ್ತದಂತೆ. ಮೊನ್ನೆ ತಾನೆ ತಲೆ ಎತ್ತಿದ ಸಿದ್ಧಾಶ್ರಮದ ಸ್ವಾಮಿಯವರು ಕಾಸಿಲ್ಲದೆ ತೊಡಗಿ ಈಗಾಗಲೇ ವರ್ಷಕ್ಕೆ ಎಂಟು ಹತ್ತು ಸಾವಿರ ರೂಪಾಯಿ ಆಶ್ರಮಕ್ಕೆ ಹುಟ್ಟುವಳಿಯಾಗುವಂತೆ ಮಾಡಿರುವಾಗ ೭ ಸಾವಿರ ಚಿಲ್ಲರೆ ಖಟ್ಟೆ ಭೂಮಿ ಮತ್ತು ೭೧೭ ಏಕರೆ ಹಸನಾದ ಕಾಡುಗಳಿರುವ ಈ ಇಲಾಖೆಯು ಹೀಗೆಹಣದ ಆಭಾವದಿಂದ ನರಳುವದು ಸರಿಯೆ?

ಈ ಇಲಾಖೆಯ ಉತ್ಪತ್ತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ದೇವಸ್ಥಾನಕ್ಕೆ ಸೇರಿದ ಏಳುನೂರು ಚಿಲ್ಲರೆ ಏಕರೆಗಳ ಜಾಗದಲ್ಲಿ ಮರಗಳನ್ನು ಬಹಳವಾಗಿ ನಷ್ಟ ಪಡಿಸದೆ, ಆಯಾಯ ಜಾಗಗಳಲ್ಲಿ ಸ್ಥಿತಿಗತಿಗನುಸಾರವಾಗಿ ಕಾಫಿ, ಕಿತ್ತಳೆ, ಯಾಲಕ್ಕಿ ಮತ್ತು ಒಳ್ಳೆಯ ವೆಣಿಸುಗಳ ತೋಟಗಳನ್ನು ಆಗುವಷ್ಟು ಮಾಡಿಸುವುದು, ಇದರ ಆದಿಯ ಕರ್ಚಿಗೆ ಬೇಕಾಗುವ ಹಣವನ್ನು ಸರಕಾರದಿಂದಲೋ ಯಾ ಖಾಸಗಿ ಬೇಂಕು ಯಾ ಜನರಿಂದ ದೀರ್ಘ ಕಂತಿನ ಸಾಲದಲ್ಲಿ ಪಡೆಯುವುದು.

ಪೂರ್ವದಲ್ಲಿದ್ದಂತೆ, ಗದ್ದೆ ಏಕ್ರೆಗೆ ೨ ಸೇರು ಬತ್ತದಂತೆಯೂ; ಇತರ ಅಸ್ತಿಗಳ ಏಕ್ರೆಗೆ ೨ ಆಣೆ ದುಡ್ಡಿನಂತೆಯೂ ಧರ್ಮಾದಾಯವನ್ನು ದೇಶದ ಉದ್ದಗಲಕ್ಕೂ ಕೋ-ಆಪರೇಟಿವ್ ಸೊಸೈಟಿಗಳ ಮೂಲಕವೂ, ಅಧಿಕೃತರಾದ ಏಜಂಟರುಗಳ ಮೂಲಕವೂ ವಸೂಲಿ ಮಾಡುವುದು.

ಈ ರೀತಿ ನೀತಿಗಳನ್ನು ಅನುಸರಿಸದೆ ಈಗ ನಡೆಯುತ್ತಿರುವ ಹಾಗೆ ಖರ್ಚು ತೋತೆ ಮೊಡುತ್ತಾ ಬರುವುದರಲ್ಲಿ ಅರ್ಥವಿಲ್ಲ. ಪೂಜಾರಿಗಳಿಗೆ ಬೇರೆ ಉತ್ಪತ್ತಿ ಇದೆ ಎಂಬುದಾಗಿ ಪೂಜಾ ಸಾಮಾನುಗಳನ್ನು ಕಂಡಾಬಟ್ಟೆ ತೋತೆ ಮಾಡುವದರಿಂದ ಪೂಜಾರಿಗಳನ್ನು ಸಾವಾಗಿಯೇ ಪೂಜೆಯಲ್ಲಿ ಶ್ರದ್ಧೆಯನ್ನು ಕಡಿಮೆ ಮಾಡಿ ಇತರ ಉತ್ಪತ್ತಿಯ ದಾರಿಗಳನ್ನು ಹುಡುಕಲು ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಪೂಜೆಗೆ ಕೊಡುವ ಸಾಮಾನುಗಳನ್ನು ಅವರೇ ಅಯಾ ಪೂಜೆಗಳಿಗೆ ಸರಿಯಾಗಿ ಉಪಯೋಗಿಸದೆ ದುರುಪಯೋಗಪಡಿಸುತ್ತಾರೆಂದಲ್ಲ ಅಂತಹ ದುರುಪಯೋಗ ಆಗದ ರೀತಿ ಕವಿಟೆಯವರೂ ಮೇನೇಜರೂ ಮತ್ತು ಪಾರುಪತ್ತೆಗಾರರೂ ನೋಡಿಕೊಳ್ಳಬೇಕೇ ವಿನಃ ಸಾಮಾನನ್ನೇ ಕೊಡದೆ ಇರುವುದು ಸರಿಯಲ್ಲ.

ನಮ್ಮ ಖಾಸಗಿ ಸೌಕರ್ಯಕ್ಕೆ ಬೇಕಾದ ವಸ್ತುಗಳನ್ನೆಲ್ಲಾ ಎಷ್ಟೇ ಕಷ್ಟವಿದ್ದರೂ ನಾವು ಒದಗಿಸಿಕೊಳ್ಳುತ್ತಿರುವಾಗ ನಮ್ಮನ್ನೆಲ್ಲಾ ಹುಟ್ಟಿಸಿ, ಸಲಹುತ್ತಿರುವ ಈಶ್ವರನ ಪೂಜೆಗೆ ಮಾತ್ರ 'ಹಣವಿಲ್ಲ ಅದುದರಿಂದ ಖರ್ಚು ತೋತೆ ಮಾಡಬೇಕೆನ್ನುವುದು ನಮ್ಮ ಭಕ್ತಿಯ ಅಂತರಾಳವನ್ನು ತೋರಿಸುತ್ತದೆ. ನಾವು ಎಷ್ಟು ಭಕ್ತಿ ಶ್ರದ್ಧೆಯಿಂದ ದೇವರನ್ನು ಪೂಜಿಸುತ್ತೇವೋ ಹಾಗೆಯೇ ದೇವರ ದಯೆಯೂ ನಮ್ಮ ಮೇಲೆ ಬರುತ್ತದೆ. In what ever way men worship me in the same way do I fulfil their desires (Bhagavat Gita).

— ಪಿ. ಜಿ. ಐಯಪ್ಪ.

ನೇಪಾಳದಲ್ಲಿ ಅರಸರ ಆಳಿಕೆ

ನಮ್ಮ ನೆರೆ ರಾಷ್ಟ್ರವಾದ ನೇಪಾಳದಲ್ಲಿನ ರಾಜಕೀಯ ಬಿಕ್ಕಟ್ಟು ಮುಖ್ಯ ಮಂತ್ರಿ ಮಾತೃಕಾ ಪ್ರಸಾದ ಕೊಯಿರಾಲಾರ ಮಂತ್ರಿಮಂಡಲದ ರಾಜೀನಾಮೆಯಲ್ಲೇ ಕೊನೆಗೊಂಡಿತು. ಅರಸು ತ್ರಿಭುವನರು ತಾವೇ ೧೦ ಜನ ಸಲಹೆಗಾರರ ಸಹಾಯದಿಂದ ಆಡಳಿತ ಪಡೆಸಲು ನಿರ್ಧರಿಸಿದ್ದಾರೆ. ಇದು ತಾತ್ಕಾಲಿಕ ಉಪಾಯವೆಂದೂ ಜನಪ್ರಿಯ ಮಂತ್ರಿಮಂಡಲವನ್ನು ರಚಿಸುವ ಪ್ರಯತ್ನಗಳು ಮುಂದುವರಿಯುವವೆಂದೂ ತಿಳಿಯುತ್ತದೆ. ಈ ತಿಂಗಳ ಕೊನೆಗೆ ಸೇರಲಿರುವ ನೇಪಾಳ ಕಾಂಗ್ರೆಸ್ ಮಹಾ ಸಮಿತಿಯ ಸಭೆಯ ನಂತರ ಪರಿಸ್ಥಿತಿ ಹೆಚ್ಚು ತಿಳಿಯಾಗಬಹುದು. ಮಾತೃಕಾ ಪ್ರಸಾದರು ರಾಜೀನಾಮೆಯ ನಂತರ ಮಾಡಿದ ಒಂದು ಭಾಷಣದಲ್ಲಿ ತಾವು ಭಾರತ ವಿರೋಧಿಗಳಿರುವೆಂಬ ತಮ್ಮ ವಿರೋಧಿಗಳ ಆರೋಪದಲ್ಲಿ ಸತ್ಯಾಂಶವಿಲ್ಲೆಂದು ಸಾರಿದ್ದಾರೆ. ಭಾರತವು ತನ್ನ ವರ್ಚಸ್ಸನ್ನು ಉಪಯೋಗಿಸಿ ನೇಪಾಳದ ಪರಿಸ್ಥಿತಿಯನ್ನು ಹಿಡಿತಕ್ಕೆ ತರಬೇಕೆಂದು ನೇಪಾಳ 'ರಾಷ್ಟ್ರೀಯ' ಕಾಂಗ್ರೆಸಿನ ಅಧ್ಯಕ್ಷರಿಗ್ಮಿಯವರು ದಿಲ್ಲಿಯಿಂದ ಒಂದು ಹೇಳಿಕೆ ಹೊರಡಿಸಿದ್ದಾರೆ ೧೯೫೫ ರಲ್ಲಿ ನೇಪಾಳದಲ್ಲಿ ಸಾರ್ವತ್ರಿಕ ಚುನಾವಣೆಯಾಗುವ ನಿರೀಕ್ಷೆಯಿದ್ದು ಆ ವರೆಗೆ ನೇಪಾಳದ ರಾಜಕೀಯ ಪಕ್ಷಗಳ ನಿಜವಾದ ಬಲಾಬಲದ ಅಂದಾಜು ಮಾಡುವುದು ತುಂಬ ಕಠಿನ.

ಭಾರತವು ಎಲ್ಲರಿಗೂ ಬೇಕಾಗಿದೆ

ಭಾರತ ರಾಷ್ಟ್ರವೊಂದು ಕಮ್ಯುನಿಸ್ಟ್ ಮತ್ತು ಆಂಗ್ಲೋ-ಅಮೆರಿಕಾದ ಜನಗಳಿಗೆ ಬೇಕಾಗಿರುವ ರಾಷ್ಟ್ರವಾಗಿದೆಯೆಂದೂ ಈ ಎರಡು ಜಣಗಳು ಭಾರತವನ್ನು ಎಂಬಿಕೆಯಿಂದ ನೋಡುತ್ತಿರುವುದಾಗಿಯೂ ಅಮೆರಿಕೆಯಲ್ಲಿ ಭಾರತದ ರಾಯಭಾರಿಗಳೆಂದು ನೇಮಕವಾಗಿರುವ ಶ್ರೀ ಜೆ. ಎಲ್. ಮೆಹತಾರವರು ಹೇಳಿದರು

"ನಮ್ಮಲ್ಲಿ ಹೆಚ್ಚಿನ ಸೈನ್ಯಬಲ ಮತ್ತು ಔದ್ಯೋಗಿಕ ಬೆಳವಣಿಗೆ ಇಲ್ಲದಿದ್ದರೂ ಜಗತ್ತಿನ ಪ್ರತೀಯೊಂದು ರಾಷ್ಟ್ರವೂ ಭಾರತವನ್ನು ಅರಿಯಲು ಬಯಸುತ್ತದೆ. ಗಾಂಧಿಜಿಯವರ ಸಂದೇಶವನ್ನು ಭೀತಿಯಿಂದ ಆವರಿಸಲ್ಪಟ್ಟ ಜಗತ್ತಿಗೆ ತಿಳಿಸಿ ಹೇಳುವುದು ಪ್ರತಿಯೊಬ್ಬ ರಾಯಭಾರಿಯ ಕರ್ತವ್ಯವು" ಎಂದೂ ಅವರು ಹೇಳಿದರು.

ಆ|| ವಿನೋಬಾರಿಗೆ ಕಾಯಿಲೆ

ಕಳೆದ ೧೭ ದಿವಸಗಳಿಂದಲೂ ಜ್ವರದಿಂದ ನರಳುತ್ತಿರುವ ಆ|| ವಿನೋಬಾ ಭಾವೆಯವರು ತಾ ೧೭ರ ಸಂಜೆ ಪ್ರಾರ್ಥನೋತ್ತರ ಭಾಷಣ ಮಾಡಲಿಲ್ಲ. ಅವರಿಗೆ ಇಂದು ೧೦೩ ಡಿಗ್ರಿ ಜ್ವರವಿದ್ದಿತು. ಅವರ ಹಾಸಿಗೆ ಇದ್ದ ಕೋಣೆಯಲ್ಲಿಯೇ ಪ್ರಾರ್ಥನೆ ನಡೆಯಿತು.

ಸ್ವೀಕಾರ.

"ಪ್ರಗತಿ" ಯೆಂಬ ಮಾಸಿಕ ಪತ್ರಿಕೆಯು ಪ್ರಥಮ ಸಂಚಿಕೆಯು ನಮ್ಮ ಕೈ ಸೇರಿದೆ. ಇದು ಕಳೆದ ಜುಲೈ ತಿಂಗಳಲ್ಲಿ ಪ್ರಾರಂಭವಾಯಿತಂತಾಗಿದೆ. ಇದರ ಸಂಪಾದಕರು ಸೋಮವಾರಪೇಟೆಯ ಬೇಳೂರಿನ ಸಿ. ಮಲ್ಲಪ್ಪನವರು. ಕೊಡಗಿನಲ್ಲಿ ಇಷ್ಟು ಮಾಸಪತ್ರಿಕೆಗಳೇ ಇಲ್ಲದಿರುವಲ್ಲಿ 'ಕನ್ನಡನಾಡು ನುಡಿಗಳ ಸೇವೆ ಮಾಡುವ ಮತ್ತು ದೀನ ದಲಿತರನ್ನು ಪ್ರಗತಿಪಥದಲ್ಲಿ ಕೊಂಡೊಯ್ಯುವ' ಉದ್ದೇಶದಿಂದ ಹೊರಟಿರುವ ಈ ಮಾಸಪತ್ರಿಕೆಗೆ ನಮ್ಮ ಸ್ವಾಗತವಿದೆ. ವಿದ್ಯಾವಂತರ ಸಂಖ್ಯೆ ಹೆಚ್ಚಿರುವ ಕೊಡಗಿನಲ್ಲಿ ಇದಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯುವುದೆಂದು ಆಶಿಸುತ್ತೇವೆ.

'ಕೊಡಗು ಸಮಾಚಾರ' ವೆಂಬ ವಾರ ಪತ್ರಿಕೆಯು ಈ ತಾರೀಕು ೧೫ರಲ್ಲಿ ಶ್ರೀ ಬಿ. ಕೆ. ಎಸ್. ಮೂರ್ತಿಯವರಿಂದ ಮಡಿಕೇರಿ 'ಪ್ರಕಾಶ' ಪ್ರೆಸ್‌ನಲ್ಲಿ ಪ್ರಕಟಿಸಲ್ಪಟ್ಟಿದೆ. ಇದರ ಪ್ರಥಮ ವಿಶೇಷ ಸಂಚಿಕೆಯು ನಮ್ಮ ಕೈ ಸೇರಿದೆ. ಕೊಡಗಿನಲ್ಲಿ ಇದು ಮೂರನೆಯ ವಾರ ಪತ್ರಿಕೆಯಾಗಿದೆ ಜನಜಾಗೃತಿಯ ಈ ಕಾಲದಲ್ಲಿ ಯೋಗ್ಯ ಪತ್ರಿಕೆಗಳ ಸಂಖ್ಯೆ ಹೆಚ್ಚಲೇಬೇಕಾಗಿದೆ. ಇದರ ಸಂಪಾದಕರು ಯಾರೆಂದು ಪ್ರಕಟವಾಗದಿದ್ದರೂ 'ಜನಜಾಗೃತಿಯ ಹಾಗೂ' ದೇಶೋದ್ಧಾರಕ ವಿಚಾರಗಳನ್ನು ಸ್ವತಂತ್ರವಾಗಿ ಪ್ರತಿಪಾದಿಸಿ ದೇಶದ ಏಳಿಗೆಗೆ ಯತ್ನಿಸುವ' ಈ ಸಹ ಉದ್ಯೋಗಿಗೆ ನಮ್ಮ ಸ್ವಾಗತವಿದೆ.

—ಸಂಪಾದಕ.

ಮಧ್ಯಪ್ರದೇಶ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ ಪಂಡಿತ ರವಿಶಂಕರ ಶುಕ್ಲರು ವೇಶ್ಯಾವೃತ್ತಿ ನಿರ್ಬಂಧಕ್ಕೆ ಸಂಬಂಧಿಸಿದ ಮಸೂದೆಯನ್ನು ಮಂಡಿಸಿ ಅದನ್ನು ಸಾರ್ವಜನಿಕ ಅಭಿಪ್ರಾಯಕ್ಕಾಗಿ ಪ್ರಸಾರಗೊಳಿಸಬೇಕೆಂದು ಸೂಚಿಸಿದ್ದು ಅಲ್ಲಿ ಮಾನ್ಯವಾಗಿದೆ.

ದೆಲ್ಲಿ ರಾಜ್ಯದ ಭೂದಳ ಸೇವಕ ಸಮಾಜದ ಅಧ್ಯಕ್ಷರಾದ ಶ್ರೀಮತಿ ಇಂದಿರಾ ಗಾಂಧಿಯವರು ಈ ಸಮಾಜದ ಕಾರ್ಯಕ್ಕಾಗಿ ತಾವು ಪ್ರತಿ ದಿನ ಐದು ತಾಸುಗಳನ್ನು ವಿನಿಯೋಗಿಸುವುದಾಗಿ ಹೇಳಿರುವರು.

ಅಲಹಾಬಾದ್ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ವಿ. ಗುಲಾಮಹಸನ್ ಮತ್ತು ಬೊಂಬಾಯಿ ಹೈಕೋರ್ಟಿನ ನ್ಯಾಯಾಧೀಶ ಶ್ರೀ ನಟವಾರಲಾಲ ಹರಿಲಾಲ ಭಗವತಿ ಇವರಿಬ್ಬರೂ ಇದೇ ಸೆಪ್ಟೆಂಬರ್ ೧೭ರಂದು ಹಿಂಪೂಸ್ತಾನದ ಪ್ರಥಮ ನ್ಯಾಯಾಧೀಶರೆಂದು ನೇಮಿಸಲ್ಪಟ್ಟಿದ್ದಾರೆ.

ಶ್ರೀ ಕೆ. ಯಂ. ಮೊಗಪ್ಪನವರು,
'ಕೊಡಗು' ಏಜೆಂಟರು,
ಸೋಮವಾರಪೇಟೆ.

ಹಿಂಸಕ ಮತ್ತು ಅಹಿಂಸಕ ತುಲನಾತ್ಮಕ ವಿವೇಚನೆ

(ಆಚಾರ್ಯ ವಿನೋಬಾರವರ ಪ್ರಾರ್ಥನಾ ಪ್ರವಚನಗಳಿಂದ ಸಂಕಲಿತ)

ಲೇ:—ಶ್ರೀ ನಾಯಕ, ಪ್ರತಿನಿಧಿ, ಸರ್ವಸೇವಾ ಸಂಘ ಇವರಿಂದ

ಇಂದು ನನಗೆ ಹಿಂಸೆ ಮತ್ತು ಅಹಿಂಸೆ ಎರಡು ಮಾರ್ಗಗಳಲ್ಲಿಂದನ್ನು ಆಯ್ದುಕೊಳ್ಳಲು ಸ್ವಾತಂತ್ರ್ಯವಿಹೆ. ಕಾವು ಯಾವುದನ್ನು ತಿಳ್ದುಕೊಳ್ಳಬೇಕೆಂಬುದನ್ನು ಭಾರತೀಯರು ವಿಚಾರಮಲಿ ಗಾಂಧೀಜಿಯವರ ಕಾಲಕ್ಕೆ ಈ ಆಯ್ಕೆಯ ಸ್ವಾತಂತ್ರ್ಯವಿದ್ದಿಲ್ಲ. ಯಾಕಂದರೆ ದೇಶವು ಗುಲಾಮಗಿರಿಯಲ್ಲಿತ್ತು. ಅಹಿಂಸೆಯ ಹೊರತು ಬೇರೆ ಹಾದಿ ಇದ್ದಿಲ್ಲ. ನಾವು ಅಸಹಾಯರಿದ್ದೆವು. ನನಗೆ ಒಬ್ಬ ಮುಂದಾಳು ಸಿಕ್ಕನು. ಅವನ ಆಧಾರದಿಂದ ನಾವು ಅಹಿಂಸೆಯ ಆಶ್ರಯ ತಕ್ಕೊಂಡೆವು. ಅದರಿಂದ ಕೆಲವು ಫಲ ಪ್ರಾಪ್ತಿಯೂ ಆಯಿತು. ಆದರೆ ಇಂದು ನಮ್ಮ ದೇಶವು ಸ್ವತಂತ್ರವಾಗಿಹೆ. ಈಗ ನಾವು ಆ ಹಿಂಸೆಯು ಮಾರ್ಗವನ್ನು ಸ್ವೀಕರಿಸಬೇಕೋ ಯಾ ಹಿಂಸಾ ಮಾರ್ಗವನ್ನು ಎಂಬುದನ್ನು ವಿಚಾರಿಸಿ ನಿರ್ಣಯ ಮಾಡಬೇಕು. ನಮಗೆ ಇಷ್ಟ ಕಂಡಂತೆ ನಾವು ನಿರ್ಣಯ ಮಾಡಬಹುದು. ಎರಡೂ ಶಕ್ತಿಗಳ ತುಲನಾತ್ಮಕ ವಿಚಾರ ಮಾಡಿ ನಾವು ನಿರ್ಣಯಕ್ಕೆ ಬರಬೇಕು. ನನ್ನ ಅಭಿಮತವಾದರೋ ಹಿಂಸಸ್ಥಾನದ ವಾತಾವರಣ, ಹಿಂದೀ ಜಪಕೆಯು ಮನೋದಶೆ, ಇಲ್ಲಿಯ ಸಾಧುಸಂತರು ಜಪಕೆಗೆ ಕೊಟ್ಟ ಶಿಕ್ಷಣ, ನಮ್ಮ ದೇಶದ ವಿಶಾಲಕ್ಷೇತ್ರ, ಅದರೊಳಗೆ ವಾಸಿಸುವ ಮಿತ್ರಿತ ಸಮಾಜ, ಇವೆಲ್ಲವುಗಳನ್ನು ವಿಚಾರದಲ್ಲಿ ತಕ್ಕೊಂಡರೆ ಮತ್ತು ಹಿಂಸೆಯು ಮೂಲಕ ಇಂಥ ಅದ ಜಗತ್ತಿನ ದುರ್ದೆಶೆಯನ್ನು ಲಕ್ಷಿಸಿದರೆ, ಅದೇ ಪ್ರಕಾರ ಹಿಂಸೆಯು ಜನತೆಗೆ ವಿಜ್ಞಾನವು ಕೂಡಿಕೊಂಡರೆ, ಜಗತ್ತಿನ ವಿನಾಶವೇ, ಆಗುವದೆಂಬುದನ್ನು ಸಹ ಲಕ್ಷಿಸಿದರೆ ನಮ್ಮ ಮುಂದೆ ಕೇವಲ ಅಹಿಂಸೆಯ ಒಂದೇ ಮಾರ್ಗವು ಉಳಿಯುತ್ತದೆ.

ಹಿಂಸೆಯ ನಿಷ್ಫಲತೆ.

ಅನೇಕ ಶತಮಾನಗಳಿಂದ ಹಿಂಸಾ ಶಕ್ತಿಯು ಪ್ರಯೋಗವು ನಡೆದಿದೆ. ಈ ಪ್ರಕಾರ ಇಷ್ಟೆಲ್ಲ ಸಂಘಟಿತ ಹಿಂಸೆಯು ಪ್ರಯೋಗ ನಡೆದರೂ ಅದು ಎಲ್ಲಿಯೂ ಪರಿಣಾಮಕಾರಿಯಾಗಿಲ್ಲ. ಜಗತ್ತಿನ ಸಮಸ್ಯೆಯು ಅದರಿಂದ ಬಗೆಹರಿದಿಲ್ಲ. ವಿಜ್ಞಾನದ ಬೆಳವಣಿಗೆಯು ಈ ದಿನಗಳಲ್ಲಂತೂ ಹಿಂಸೆಯು ನಿರುಪಯುಕ್ತತೆಯು ಹೆಚ್ಚೆಚ್ಚು ಪ್ರಕಟವಾಗುತ್ತಿದೆ. ಹೀಗಿದ್ದರೂ ಮನುಷ್ಯನಿಗೆ ಬೇರೆ ಯಾವದೂ ಸೂಚಿಸುವುದಿಲ್ಲ. ಮತ್ತು ಯಾವದೊಂದು ತೊಡಕು ಬಂದೊಡನೆ ಅವನು ಹಿಂಸೆಯನ್ನಾಶ್ರಯಿಸುತ್ತಾನೆ. ಆದರೆ ಹಿಂಸೆಯಲ್ಲಿದ್ದ ಶಕ್ತಿಗಿಂತ ಹೆಚ್ಚಿನ ಹಾಗೂ ನಿಶ್ಚಿತ ಪರಿಣಾಮಕಾರಿಯಾದ ಶಕ್ತಿಯು ಅಹಿಂಸೆಯಲ್ಲಿದೆ. ಮಾನವನು ಅದರ ಶೋಧನೆಯನ್ನೂ, ಪ್ರಯೋಗವನ್ನೂ ಬಹಳ ಸಾರಿ ವ್ಯಕ್ತಿಗತ ಜೀವನದಲ್ಲಿ ಮಾಡಿರುವನು. ಸ್ವಲ್ಪ ಮಟ್ಟಿಗೆ ಕುಟುಂಬ ಜೀವನದಲ್ಲೂ ಮಾಡಿರುವನು. ಅಲ್ಪಾಂಶದಲ್ಲಿ ಸಾಮಾಜಿಕ ಜೀವನದಲ್ಲೂ ಮಾಡಿರುವನು. ವ್ಯಾಪಕ ಪ್ರಮಾಣದಲ್ಲಿ ಅಹಿಂಸೆಯ ಪ್ರಯೋಗ ಮಾಡುವ ಸಂಧಿಯು ಈಗ ಬಂದಿದೆ. ಆದ್ದರಿಂದ ಹಿಂಸಾ ಶಕ್ತಿಯ ಶೋಧದಲ್ಲಿ ಎಷ್ಟೆಷ್ಟು ಹೆಚ್ಚು ಮಾಡಿ ನಮ್ಮೊಳಗೆ ತೊಡಗಿಸಿಕೊಂಡರೋ ಅಷ್ಟು ಪ್ರಮಾಣದ ಮೇಲೆ ಜಗತ್ತಿನ ಕಲ್ಯಾಣವಾಗುವದು.

ಮೂಢ ಶಕ್ತಿಯ ಮೇಲೆ ವಿಶ್ವಾಸ!

ಅತ್ಯಂತ ಕಠಿಣ ಸಮಸ್ಯೆಯನ್ನು ಸಹ ಅಹಿಂಸೆಯಿಂದಲೇ ಪರಿಹರಿಸಲು ಸಮರ್ಥರಿದ್ದೇವೆಂದು ನಮ್ಮೊಳಗಿನ ಯಾರೊಬ್ಬರೂ ಕ್ವಚಿತ್ತಾದರೂ ಹೇಳಬಲ್ಲರೇ. ಬುದ್ಧಿಯಿಂದ ತಿದ್ದಿ ಮಾಡುವ ಸಂಗತಿ ಇದಲ್ಲ. ಬುದ್ಧಿ ಶಕ್ತಿಗೆ ಇತಿಮಿತಿ ಇದೆ. ಅದು ತನ್ನ ಈ ಇತಿಮಿತಿಯೊಳಗೇ ಕೆಲಸ ಮಾಡಬಲ್ಲದು. ಇದಕ್ಕೂ ಮುಂದೆ ಅದರ ಶಕ್ತಿ ನಡೆಯುವದಿಲ್ಲ. ಆಗ ಮನುಷ್ಯನು ಶ್ರದ್ಧೆಯಿಂದಲೇ ಕೆಲಸ ಮಾಡಬೇಕಾಗುತ್ತದೆ. ಆದರೆ ನಾನು ಅದಕ್ಕೂ ಮುಂದೆ ಹೋಗಿ ಪ್ರಶ್ನೆ ಮಾಡುವದೇನಂದರೆ— ಹಿಂಸೆಯು ಎಲ್ಲ ಸಮಸ್ಯೆಗಳನ್ನು ಬಗೆಹರಿಸಬಲ್ಲದೆಂದೂ ಸಿದ್ಧವಾಗಿದೆಯೇ? ಯಾವ ಹಿಂಸಾವಾದಿಯು ತಾನೇ ಹಿಂಸೆಯ ಯಾ ಭೌತಿಕ ಶಕ್ತಿಯು ಆಧಾರದಿಂದ ತಾನು ನೈತಿಕವೆಂದೆಣಿಸುವ ಸಮಸ್ಯೆಯನ್ನು ಬಗೆಹರಿಸಬಲ್ಲೆನೆಂದು ಎದೆ ತಟ್ಟಿ ಹೇಳಿಯಾನು? ಭೌತಿಕ ಶಕ್ತಿಯಾದರೋ ಒಂದು ಮೂಢ ಶಕ್ತಿ ಇದೆ. ನೀತಿ ಹೀನರು ಸಹಾ ಅದನ್ನು ಉಪಯೋಗಿಸಬಲ್ಲರು. ಭೌತಿಕ ಶಕ್ತಿಯ ಮೇಲೆ ಅರ್ಥಾತ್ ಹಿಂಸೆಯ ಮೇಲೆ ವಿಶ್ವಾಸವಿಡುವದೆಂದರೆ ಮೂಢ ಶಕ್ತಿಯ ಮೇಲೆ ವಿಶ್ವಾಸವಿಟ್ಟಂತೆ ಸರಿ. ಆದರೆ ಜನರಿಗೆ ಇದರ ಅಭ್ಯಾಸ ಆಗಿ ಹೋಗಿದೆ. ಆದ್ದರಿಂದ ಜನರು ಈಶ್ವರನ ಮೇಲೆ ಸಹ ವಿಶ್ವಾಸವಿಡುವದಿಲ್ಲ. ಆದರೆ ಹಿಂಸೆಯು ಮೇಲೆ ವಿಶ್ವಾಸವಿಡುತ್ತಾರೆ. ಬಾಲಕರಿಗೆ ತಿಳಿಸಿ ಹೇಳಲು ಗುರುಜಿಯು ಅಸಮರ್ಥನಾದಾಗ ಬೆತ್ತದ ಪ್ರಯೋಗ ಮಾಡುತ್ತಾನೆ. ಅರ್ಥಾತ್ ಈಶ್ವರನಿಗಿಂತ ಹೆಚ್ಚಿನ ಶಕ್ತಿಯು ಹೊಡೆಯುವದರಲ್ಲಿದೆಯೆಂದು ತಿಳಿಯುತ್ತಾನೆ. ಇದೊಂದು ಅತ್ಯಂತ ಮೂಢ ಶ್ರದ್ಧೆಯೆಂದು ನನ್ನ ಅಭಿಮತವು. ಆದರೆ ಹಿಂಸೆಯು ಮೇಲೆ ಈ ಪ್ರಕಾರ ಶ್ರದ್ಧೆ ಇಟ್ಟಿಲ್ಲ. ಅದು ಬುದ್ಧಿವಂತಿಕೆಯಿಂದಾಗಿದ್ದರೂ ಅಷ್ಟೊಂದು ಮೂಢತೆ ಮಾತ್ರ ಎಂದೂ ಆಗಲಿಕ್ಕಿಲ್ಲ. ಆದರೆ ಎಷ್ಟೋ ಬುದ್ಧಿಯು ಆಧಾರವು ಈ ಶ್ರದ್ಧೆಗೆ ಇದೆ.

ಭೂಧಾನಯಜ್ಞ ಮತ್ತು ಕಮ್ಯೂನಿಝಮ್

ಭೂಮಿಯು ಸಮಸ್ಯೆಯು ಅನ್ಯ ದೇಶಗಳಲ್ಲಿ ಇದ್ದಂತೆ ಹಿಂದೂಸ್ಥಾನದಲ್ಲಿ ಇದೆ. ಜಮೀನು ಇದ್ದವರ ಸದ್ಭಾವನೆಯನ್ನು ಜಾಗ್ರತ ಮಾಡಿ ಜಮೀನು ಇಲ್ಲದವರಿಗೆ ಅದನ್ನು ಕೊಡಿಸಿ ಈ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನದಲ್ಲಿ ನಾನೂ ತೊಡಗಿಸ್ಕೊಂಡಿದ್ದೇನೆ. ಇದು ಶಕ್ಯವಾದರೆ—ಇದು ಶಕ್ಯವಾಗುವುದೆಂದು ನನಗೆ ಆಶೆ ಇದೆ—ಹಿಂದೂಸ್ಥಾನದಲ್ಲಿ ಒಂದು ರಕ್ತಹೀನ ಕ್ರಾಂತಿ ಆಗುವುದು. ಮತ್ತೆ ಈ ದೇಶವು ಕಮ್ಯೂನಿಝಮ್‌ನ ಗುಣಗಳನ್ನು ಗ್ರಹಣ ಮಾಡಿಕೊಂಡು ಅದರೊಳಗಿನ ದೋಷಗಳು ಇಲ್ಲಿ ಪ್ರವೇಶಿಸದಂತೆ ಮಾಡಲು ಸಮರ್ಥವಾಗುವುದು. ನನ್ನ ಅಭಿಪ್ರಾಯದಂತೆ ಸಾಮ್ಯವಾದವೇನು ಕೆಟ್ಟ ವಸ್ತುವಲ್ಲ. ಅದರೆ ಹಿಂಸೆಯಿಂದ ಅದನ್ನು ಜನತೆಯು ಮೇಲೆ ಹೇರಲು ಪ್ರಯತ್ನಿಸಲಾಗುತ್ತಿರುವುದು ಕೆಟ್ಟದ್ದು, ಅನಿಷ್ಟವು. ನನಗೆ ಸಾಮ್ಯವಾದದಿಂದ ಯಾವುದೇ ಅಂಜಿಕೆ ಇಲ್ಲ ಯಾಕೆಂದರೆ ಸಾವಿರಾರು ವರುಷಗಳಿಂದ ನಮ್ಮ ಸಂಸ್ಕೃತಿಯು ಹಿಂಸಾ ವಿರೋಧಿಯಾಗಿದೆ. ಮತ್ತು ಗಾಂಧೀಜಿಯವರು ನಮ್ಮ ದೇಶಕ್ಕೆ ಅಹಿಂಸಾ ಶಕ್ತಿಯನ್ನು ದಯಪಾಲಿಸಿದ್ದಾರೆ. ನನ್ನ ವಿಶ್ವಾಸವಾದರೋ ಹಿಂದುಸ್ತಾನವು ಅಹಿಂಸಾ ಶಕ್ತಿಯಿಂದಲೇ ಬದುಕಬಲ್ಲುದು. ನನಗೆ ಹೀಗೂ ವಿಶ್ವಾಸವಿದೆ— ಏನಂದರೆ ಅಮೇರಿಕೆಯಂಥ ದೇಶವೂ ಕೂಡ ಅಂಜಿಕೆಯನ್ನು ಒಕ್ಕೊಟ್ಟ ಅಹಿಂಸಾ ಶಕ್ತಿಯು ಪ್ರಯೋಗ ಮಾಡಿ ನೋಡಿದರೆ ಅದು ಇಡೀ ಜಗತ್ತನ್ನು ನಿರ್ಭಯವಾಗಿ ಮಾಡಬಲ್ಲುದು. ತಾನೂ ನಿರ್ಭಯವಾಗಿ ಉಳಿಯಬಲ್ಲುದು.

ಕ್ರಾಂತಿಯ ಗಣಿತ

ಕೆಲವರ ಹೇಳಿಕೆಯಿಂದರೆ—ಈ ರೀತಿಯಿಂದ ಭೂ ಸಮಸ್ಯೆಯನ್ನು ಬಗೆ ಹರಿಸಲು ೫೦೦ ವರ್ಷಗಳು ಬೇಕಾಗುವವೆಂದು ಇದಕ್ಕೆ ನನ್ನ ಉತ್ತರವೆಂದರೆ—"ಕ್ರಾಂತಿಗಳು ಇಂತ ಗಣಿತದಿಂದ ನಡೆಯುವದಿಲ್ಲ. ಒಂದು ವರುಷದಲ್ಲಿ ಸ್ವರಾಜ್ಯ ಕೊಡಿಸುತ್ತೆನೆಂಬ ಮಾತನ್ನು ಗಾಂಧಿಜಿಯವರು ಹೇಳಿದ್ದರೇ. ಮತ್ತು ನಾವು ಅವರ ಮಾತನ್ನು ಕೇಳಿದ್ದರೆ, ಒಂದು ದಿನದ ವಟ್ಟಿಗೆ ನೌಕರಿಗಳನ್ನು ಬಿಟ್ಟು ಕೊಟ್ಟಿದ್ದರೆ, ವಕೀಲರೆಲ್ಲರೂ ಕೋರ್ಟ್‌ಗಳ ಮೆಟ್ಟಿಲುಗಳನ್ನೇರದೇ ಹೋಗಿದ್ದರೆ, ವಿದ್ಯಾರ್ಥಿ ವೃಂದವು ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಿದ್ದರೆ, ಸರಕಾರಿ ನೌಕರರೆಲ್ಲರೂ ತಮ್ಮ ತಮ್ಮ ಮನೆಯಲ್ಲಿ ಕೂತು ಬಿಟ್ಟಿದ್ದರೆ, ಸ್ವರಾಜ್ಯವು ಸಿಕ್ಕಿ ಹೋಗಿತ್ತು. ಆದರೆ ಅದು ೩೫ ವರುಷಗಳ ಮೇಲೆ ಸಿಕ್ಕೇ ಸಿಕ್ಕಿತು. ಮಹಾತ್ಮ ಗಾಂಧಿಯವರ ಶ್ರದ್ಧೆಯನ್ನು ಎಷ್ಟೆಂತ ಹೊಗಳಲಿ ಒಂದು ದಿನ ವಿಶ್ರಾಂತಿ ಗಾಂಧಿಜಿಯವರಿಗೆ ಹೇಳಿದರು—ಬಾಪೂ, ನಿಮ್ಮ ವರುಷದ ಅವಧಿಯಲ್ಲಿ ಇನ್ನು ಬರೇ ಹದಿನೆಂಟು ದಿನಗಳು ಉಳಿದವು?" ಬಾಪೂಜಿಯವರು ಉತ್ತರ ಕೊಟ್ಟರು "ಹದಿನೆಂಟೇ ದಿನಗಳಲ್ಲಾಡರೋ ಮಹಾಭಾರತ ಯುದ್ಧವು ಕಾನೇ ಮುಗಿದು ಹೋಗತ್ತು. ಇದನ್ನು ಮರೆಯಬೇಡಿರಿ!" ಇಂಗ್ಲಿಷರು ಸಹ ಆ ವರ್ಷದ ಬಗ್ಗೆ ಸ್ವರಾಜ್ಯವು ಬಹಳ ಮುಟ್ಟಿಗೆ ಸಿಕ್ಕಿಹೋಗಿತ್ತೆಂದು ಬರೆದು ಇಟ್ಟಿದ್ದಾರೆ. ನಾವು ಜನರು ಅವರ (ಗಾಂಧಿಯವರ) ಕಾರ್ಯಕ್ರಮವನ್ನು ಪೂರ್ಣವಾಗಿ ಕೃತಿಯಲ್ಲಿಳಿಸಲಿಲ್ಲ. ಅದ ಕಾರಣ ಒಂದರ ಬದಲು ೩೫ ವರುಷ ತಾಗಿತು ಜನತೆಯು ಜೀವನವಲ್ಲಿಯೇ ಪರಿವರ್ತನೆ ಆಗುವ ಪ್ರಶ್ನೆ ಬಂದಾಗ ಗಣಿತದಿಂದ ಕೆಲಸವಾಗುವುದಿಲ್ಲ. ನಾನು ಆಶ್ರಮದಲ್ಲಿನ್ನೆನ್ನ ಸಹಕಾರಿಗಳೊಡನೆ ಒಂದು ಪಾವಿಲನ್ನು ಅಗಿದೆ. ಒಂದು ವರ್ಷ ನನಗೆ ತಗಲಿತು. ಇದರಿಂದ ಲೆಕ್ಕಹಾಕಿದರೆ ದೇಶದಲ್ಲಿ ಒಂದು ಕೋಟಿ ಭಾವಿಗೆಳಾಗಲು ಒಂದು ಕೋಟಿ ವರುಷ ಹತ್ತುವುದೆಂದ ಲೆಕ್ಕ ಹಾಕುವುದು ಮೂರ್ಖತನವಾಗುವದು ನಾನೊಬ್ಬನೇ ಕೆಲಸ ಮಾಡುವುದಾದರೆ ನೀವೆಲ್ಲರೂ ಕೈಕಟ್ಟಿಕೊಂಡು ಸುಮ್ಮನೆ ಕೂತರೆ ಮೇಲಿನಂತೆ ಗಣಿತ ಹಾಕುವುದು ಸರಿಯಾದೀತು. ಆದರೆ ನಾವು ತಮಗೆ ಹೇಳಬಯಸುತ್ತೇನೆ. —"ಈ ಕಾರ್ಯವು ಕ್ರಾಂತ್ರಿತವೂ ಅಲ್ಲ; ಯಾಂತ್ರಿಕವೂ ಅಲ್ಲ; ಇದೊಂದು ಮಾಂತ್ರಿಕ ಪ್ರವೃತ್ತಿ. ಇದಕ ಒಂದು ಮಂತ್ರವಿದೆ.

ಕ್ರಾಂತಿಯ ಮಂತ್ರಶಕ್ತಿ

ಆ ಮಂತ್ರಶಕ್ತಿಯು ಸಂಚಾರವಾಗಬೇಹತ್ತಿದೆ. ಯಾವುದೊಂದು ಮಂತ್ರವು ಸಮಾಜದಲ್ಲಿ ಸಂಚರಿತವಾಗುವದೇ ತಡ, ಅದು ತೀವ್ರಗತಿಯಿಂದ ಕಾರ್ಯಮಾಡುತ್ತದೆ ಸಮಯು ತಾಗುವುದು ಮಂತ್ರವನ್ನು ಹಸ್ತಗತ ಮಾಡಿಕೊಳ್ಳಲು; ಮಂತ್ರಶೋಧನೆಗೆ ಮಂತ್ರಸಿದ್ಧಿಗೆ ಸಮಯು ತಾಗುತ್ತದೆಂಬುದು ನಿಜ.ದೀಪವನ್ನು ಉರಿಸುವ ಹುಂಬಿಕೆಯು ಹಸ್ತಗತವಾಗುವತನಕ ದೀಪವನ್ನು ಉರಿಸಲು ತಾಗುವ ಹೊತ್ತನ್ನು ಗಣಿತದಿಂದ ಎಣಿಸ ಬೇಕಾಗುತ್ತಿತ್ತು. ಆದರೆ ಒಂದು ಬಾರಿ ದೀಪವು ಉರಿಯತೊಡಗಿದರೆ ಲಕ್ಷಾವಧಿ ವರುಷಗಳ ಕತ್ತಲೆಯು ದೂರವಾಗುವುದು. ಎಲ್ಲ ಕಡೆಯಲ್ಲಿಯೂ ಭೂಮಿಯು ಬೆಳಗಲು ಏನೊಂದು ವಿಳಂಬವಾಗಲಾರದು. ಗಂಗಾನದಿಯು ಪ್ರಾರಂಭದಲ್ಲಿ ಕಲ್ಲು ಗುಂಡುಗಳೊಳಗಿಂದ, ಬಂಡೆಗಳೊಳಗಿಂದ ಹಾದಿಯನ್ನು ಮಾಡಿಕೊಳ್ಳಬೇಕಾದರೆ ಬಹಳ ಕಾಲತಾಗಿತು. ಆದರೆ ಈಗ ಅದು ಪೂರ್ಣ ವೇಗದಿಂದ ಸಮುದ್ರದ ಕಡೆಗೆ ಹಾವಿಸುತ್ತದೆ. ಭಗವಾನ್ ಯೇಸುಕ್ರಿಸ್ತನು ಎರಡು ವರುಷ ಕೆಲಸ ಮಾಡಿದನು. ಅವನಿಗೆ ಬರೇ ೧೨ ಶಿಷ್ಯರು ಸಿಕ್ಕಿದರು. ಇದರ ಮೇಲಿಂದ ೧೮ ಜನರಿಗೆ ಎಂಡು ವರುಷ ೬ ಕೋಟಿ ಕ್ರಿಸ್ತಿಯರಾಗಲು ಎಷ್ಟು ವರುಷ ಎಂತ ಗಣಿ

ತ ಹಾಕಿದರೆ ಅದು ತಪ್ಪಾಗುವುದು. ಆ ದ್ದರಿಂದ ಮಾಂತ್ರಿಕ ಸಂಗತಿಗೆ ತಾಂತ್ರಿಕ ಸಹಿತ ಹಚ್ಚಿ ಉಪಯೋಗವಿಲ್ಲ. ಮಂತ್ರ ಸಿದ್ಧಿಯಾಗುವುದೇ ತಡ, ಕೆಲಸ ಪೂರ್ತಿ ಆಯಿತೆಂದು ತಿಳಿಯಬೇಕು. ಆದ್ದರಿಂದ ಈ ಕೆಲಸವು ೫೦ ವರುಷಗಳಲ್ಲಿಲ್ಲ. ಆ ಪರೆ ಒಂದೇ ವರುಷದಲ್ಲಿ ಪೂರ್ತಿ ಆಗುವು ದು ಶಕ್ಯವಿದೆ. ಮತ್ತು ವಾಸ್ತವಿಕ ಆಗಿ ಅದು ಪೂರ್ತಿ ಆಗಿದೆ.

ಕೆಲವು ಸಂಸ್ಮರಣೀಯ ಪ್ರಸಂಗಗಳು

ಆಚಾರ್ಯ ವಿನೋಬಾರವರ ಪಾದ ಯಾತ್ರೆಯಲ್ಲಿ ಅಲ್ಲಲ್ಲಿ ಕೆಲ ಅದ್ಭುತ ಪ್ರಸಂ ಗಗಳು ಒದಗುತ್ತವೆ. ಕೆಲವನ್ನು ಇಲ್ಲಿ ಉದಾಹರಣೆಗಾಗಿ ಕೊಟ್ಟಿದೆ. ಒಂದು ದಿನ ಒಂದು ಸ್ಥಳದಲ್ಲಿ ಅವರ ಸಹಯಾತ್ರಿ ಶ್ರೀ ಗೌತಮ ಬಜಾಜ ಅವರು ಮಂಗ ರೂ೫ಎಂಬ ಹೆಸರಿನ ಹರಿಜನ ಬಾಂಧವ ನೊಬ್ಬನನ್ನು ವಿನೋಬಾಜೀಯವರ ಕಡೆ ಕರೆತಂದರು. ವಿನೋಬಾಜೀಯವರ ಘೋಷಣೆಯಲ್ಲಿ ಸಂದರ್ಶನಕ್ಕಾಗಿ ಬಂದ ಜ ನಪೇನುದಾರರೂ, ಮಿಲ್ಲು ವಾಲೀಕರೂ, ಶ್ರೀಮಂತ ವರ್ಗೆರ ದಟ್ಟಣೆ ಇತ್ತು. ಗೌ ತಮ ಬಜಾಜರು ಹೇಳಿದರು.

" ವಿನೋಬ ಜಿಯವರೇ! ಈ ಹರಿ ಜನರ ಹತ್ತಿರ ಬಹಳೇ ಸಣ್ಣ ಹೊಲವಿ ದೆ. ಎಷ್ಟು ತಿಳಿಸಿ ಹೇಳಿದರೂ ಅವನು ಕೇಳುವದಿಲ್ಲ. ಎಲ್ಲವನ್ನೂ ಕೊಟ್ಟು ಬಿಡ ಲಿಚ್ಛಿಸುತ್ತಾನೆ" ಸರ್ವಸ್ವ ಸಮರ್ಪಣೆ ಮಾಡಲು ಬಂದ ಈ ಹರಿಜನನ ಕಡೆಗೆ ವಿನೋಬಾರವರು ಕೃತಜ್ಞತಾ ದೃಷ್ಟಿ ಯಿಂದ ನೋಡಿದರು. ಅವನು ವಿನೋ ಬಾರ ಕಾಲಿಗೆ ಬಿದ್ದನು. 'ಮಹಾತ್ಮಾ ಜ್ಞ ಈ ಧನ್ಯ ತುಚ್ಛ ದೇಣಿಗೆಯನ್ನು ಸ್ವೀ ಕರಿಸಿರಿ' 'ನಿನಗೆ ಏನೂ ಉಳಿಯಲಿಕ್ಕಿಲ್ಲ' ಅವನು ಉತ್ತರಿಸಿದನು 'ಕಾರಣಾನೆಯಲ್ಲಿ ಕೆಲಸ ಮಾಡುವದು ಧನ್ಯ ಪ ಲಿಗೆ ಇದ್ದೇ ಇದೆ. ಇಷ್ಟು ಹೊಲದಿಂದ ನನ್ನ ನಿರ್ವಾ ಹ ಆಗುವದಿಲ್ಲ. ಮನೆಯಲ್ಲಿ ಆರೇಳು ಮಂದಿ ಇರುತ್ತಾರೆ. 'ಈ ಹೊತ್ತು ಹೊ ಲದಲ್ಲಿ ಏಷ್ಟು ಬೆಳೆಯಬಹುದೆ' 'ಕೆಲವು ಬ ತ್ತನವನ್ನು ಬಿತ್ತಿದ್ದೇನೆ. ಅದರ ಬೆಳೆ ತ ಕ್ಕೊಂಡಿದ್ದೇನೆ' 'ನಿನ್ನ ಭಾವನೆ ನೋಡಿ ಬಹಳೇ ಸಂತೋಷವಾಗುತ್ತದೆ. ಆದರೆ ಈ ಹೊಲವು ನಿನ್ನ ಕಡೆಗೇ ಉಳಿಯಲಿ' ಎಂದು ವಿನೋಬಾರವರು ತಿಳಿಸಿ ಹೇಳಿದ ರೂ ಅವನು ಕೇಳಲಿಲ್ಲ. 'ನಾನು ಸಂಕ ಲ್ಪ ಮಾಡಿಬಿಟ್ಟಿದ್ದೇನೆ. ಸ್ವೀಕರಿಸಿರಿ' ಎಂ ದು ಆಗ್ರಹ ಕೊಟ್ಟನು. ಆಗ ವಿನೋ ಬಾರವರು ದಾನಪತ್ರವನ್ನು ಸ್ವೀಕರಿಸಿ ಆದರ ಮೇಲೆ 'ಈ ಮನುಷ್ಯನ ಮನೋ ಸ್ಥಿತಿಯನ್ನು ನೋಡಲಾಗಿ ಇದನ್ನು ಇವ ನಿಗೇ ಕೊಡಬೇಕು. ಅವನ ಆಗ್ರಹದ ಮೂಲಕ ಅವನನ್ನು ಸಮೂಧಾನಪಡಿಸ ಲು ಸ್ವೀಕರಿಸಲಾಯಿತು. ಈಗ ಅದನ್ನು ಅವನಿಗೇ ಪ್ರಸಾದ ರೂಪವಾಗಿ ತಿರುಗಿ ಕೊಡುತ್ತೇನೆ' ಎಂದು ಮಂಗರೂನ ಕಂಠ ಮಗದ್ಗದಿತವಾಯಿತು. ಅವನು ಆ ಪ್ರಸಾ ದವನ್ನು ಗ್ರಹಣ ಮಾಡಿದನು. ಮತ್ತು ವಿನೋಬಾರ ಪಾದಗಳ ಮೇಲೆ ಪುಸ್ತಕದ ಮೇಲಿಟ್ಟ ಪ್ರಸನ್ನಗೊಳಿಸಿ ಹೊರಟು ಹೋ ದನು. ಗೋರಖಪುರದಿಂದ ಮುಂದಿನ ಮುಕ್ಕಾಮಿಗೆ ಹೋಗಬೇಕಾದರೆ ಸಾ ಮಾನಿನ ಗಾಡಿಯು ಸಂಗಡ ಬಾರಿ ತೋರಿ ಸಲು ಒಬ್ಬ ಹರಿಜನನು ಬಂದಿದ್ದನು. ಅವನು ಬಹು ಸಂಕೋಚದಿಂದ ವಿನೋ ಬಾರ ಕಾರ್ಯದರ್ಶಿ ಕಡೆಗೆ ಹೇಳಿದನು. 'ನಾನೂ ಕೆಲವು ಭೂಮಿ ದಾನ ಮಾಡಲಿಚ್ಛಿಸುತ್ತೇನೆ. ನಮ್ಮ ಕುಟುಂಬದಲ್ಲಿ ೧೨ ಮಂದಿ ಇದ್ದೇವೆ. ೫ ಏಕರೆ ಜಮೀನು ಇದೆ. ಕೂಲಿ ಕೆಲಸ ಮಾಡಿದ ಹೊ ರತು ಜೀವನ ಸಾಗಲಾರದು. ಆದ್ದರಿಂ ದ ನಾನೂ ಕೆಲವು ಕೊಡಬೇಕೆಂದು ಅಪೇ ಸುತ್ತದೆ. ಆದರೆ ಬರೇ ಒಂದೆರಡು ಏ ಕರೆ ಕೊಡಲು ಸಂಕೋಚವೆನಿಸುತ್ತದೆ. ಏನೂ ಸೂಚಿಸುವದಿಲ್ಲ. ನಿಮ್ಮ ಸಲಹೆ ಯೇನು?' ಎಂದು ಕೇಳಿದನು. ಆಗ ಕಾರ್ಯದರ್ಶಿಯು ಮನಸ್ಸು ಇಂಥ ಸು ಧಾಮರ ಭಕ್ತಿಯಿಂದ ಕರಗಿತು. ಅವ ನದು ಬಹಳೇ ಅಗ್ರಹವಾದ್ದರಿಂದ ಕೆಲವೇ ಗುಂಟೆ ಜಮೀನು ಅವನಿಂದ ಸ್ವೀಕರಿಸ ಲಾಯಿತು. ಈ ಸಂಗತಿಯು ಮುಂದೆ ಸಾಮಾನಿನ ಗಾಡಿ ಹೊಡಕೊಂಡು ಬಂದ ವನಿಗೆ ತಿಳಿಯಿತು. ಆಗ ಅವನೂ ದಾನ ಪತ್ರ ಬರೆಯುತ್ತೇನೆಂದು ತನ್ನ ಕೆಲವು ಗುಂಟೆ ಹೊಲವನ್ನು ದಾನ ಮಾಡಿದನು. ವಿನೋಬ ರವರು ಅವರ ಸಹಯಾತ್ರಿ ಶ್ರೀ ಹರೀಶಭಾಯಿಯವರ ಊರಲ್ಲಿ ಐದು ದಿ ನಗಳು ನಿಂತರು. ಊರಿನ ಹೆಣ್ಣು ಮಕ್ಕ ಳು ಮಂಗಲ ಗೀತಗಳಿಂದ ಅವರನ್ನು ಸ್ವಾಗತಿಸಿದರು. ಹರೀಶಭಾಯಿಯವರ ತಾಯಿಯವರು ಮುಂದೆ ಬಂದು ನಮ ಸ್ಕಾರ ಮಾಡಿದರು. ಆದರೆ ಸಂಕೋಚ ದಿಂದ ಮಾತನಾಡಲಾರದೇ ನಿಂತಿದ್ದರು. ವಿನೋಬಾಜಿಯವರು ಏನಾದರೂ ಕೇಳು ವದಿಹೆದೆ ಎಂದು ಕೇಳಲಾಗಿ ಅವಳು ಹೇಳಿದಳು 'ಒಟ್ಟು ನಮ್ಮದು ೧೫ ಏಕರೆ ಜಮೀನು ಇದೆ. ಕುಟುಂಬದಲ್ಲಿ ನಾವು ಇದ್ದವರು ಐದು ಮಂದಿ ತಾವು ಆರನೆ ಯವರಾದಿರಿ. ಆದ್ದರಿಂದ ಎರಡು ಏಕ ರೆ ಜಮೀನು ಸ್ವೀಕರಿಸಿರಿ' ವಿನೋಬಾಜಿ ಯವರು ಅದನ್ನು ಆ ಮಾತಿನು ಅಶೀ ರ್ವಾದವೇ ಎಂದು ಸ್ವೀಕರಿಸಿದರು. ಮತ್ತು ಆ ದಿನದ ಪ್ರವಚನದಲ್ಲಿ ಈ ಎರ ಡು ಏಕರೆಯನ್ನು ಎರಡು ಲಕ್ಷಕ್ಕೆ ಸಮಾನ ಎಂದು ಹೇಳಿದರು.

'ನವಯುಗ'

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಿಲ್ಲದೆ ಚಿನ್ನ ಮತ್ತು ಚಿನ್ನದ ನೆಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೊತೆ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಪ್ರೈವೆಟ್, ವಾರ್ಡ್ಸ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿ ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯು ವಸೂಲಿಯ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಲಘುಸಿಫಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಮ್ಯಾನೇಜರ್.

ಕೆ. ಪಿ. ಅಪ್ಪಯ್ಯ, ಸೆಕ್ರೆಟರಿ ಮತ್ತು ಖಜಾಂಚಿ.

ಈಜಿಪ್ಟಿನಲ್ಲಿ ಸಮಗ್ರ ಭೂ ಸುಧಾರಣೆ.

ಈಜಿಪ್ಟಿನಲ್ಲಿ ಭೂ ಒಡೆತನವನ್ನು ೨೦೦ ಫೆಡಾನ ಏಕ್ರೆಗಳಿಗೆ ನಿಯಂತ್ರಣಗೊಳಿಸಿ ಸಮಗ್ರ ಭೂ ಸುಧಾರಣಾ ಕಾರ್ಯಕ್ರಮವು ಕೈಗೊಳ್ಳಬೇಕೆಂಬ ಬೇಡಿಕೆಯನ್ನು ಜನ ರಲ್ ನಗೀಬ್ ಮೊಹಮ್ಮದರ ಕೇಂದ್ರ ಕಚೇರಿಯು ಮುಖ್ಯ ಮಂತ್ರಿ ಅಲಿ ಮೆಹ ರ ಸರಕಾರಿಗೆ ಒಪ್ಪಿಸಿದೆ.

ಜ. ನಗೀಬರ ಕಚೇರಿಯಿಂದ ಒಪ್ಪಿ ಸಲ್ಪಟ್ಟ ಬೇಡಿಕೆಗಳ ಮೇರೆಗೆ ಸರಕಾರವು ಉಳಿಕೆಯ ಭೂಮಿಯನ್ನೆಲ್ಲ ವಶಪಡಿಸಿ ಕೊಂಡು, ೫೦ ವರ್ಷದವಧಿಯಲ್ಲಿ ಆ ಭೂ ಮಿಗಾಗಿ ಶೇ ೩½ ಬಡ್ಡಿಯ ಮೇಲೆ ಪರಿ ಹಾರ ಹಣವನ್ನು ಕಂತಿನ ಮೇಲೆ ಕೊಡ ಲಾಗುವುದು.

ಭೂಮಿಯನ್ನು ಕೊಳ್ಳುವ ಬೆಲೆಯನ್ನು ೧೯೩೭, ೩೮ ಮತ್ತು ೩೯ ಈ ಮೂರು ವ ರ್ಷಗಳಲ್ಲಿ ಇದ್ದ ಬೆಲೆಯ ಪಟ್ಟಿಯ ಮೇರೆ ಗೆ ನಿರ್ಧರಿಸಲಾಗುವುದು.

ಸರಕಾರಿ ಭೂಮಿಯನ್ನು ಭೂರಹಿತ ರೈತರಿಗೆ ೫೦ ವರ್ಷಗಳಲ್ಲಿ ಹಣ ಮುಟ್ಟಿ ಸುವ ಸುಲಭವಾದ ಕರಾರುಗಳ ಮೇರೆಗೆ ಹಂಚಲಾಗುವುದು.

ಪ್ರತಿ ಹಳ್ಳಿಯಲ್ಲಿಯೂ ಸಹಕಾರಿ ಸಂಘಗಳನ್ನು ರಚಿಸಲಾಗುವುದು.

ಕಂತಿನ ಮೇರೆಗೆ ಭೂಮಿಯನ್ನು ಕೊಳ್ಳುವವರಿಗೆ ಅದನ್ನು ಈ ೫೦ ವರ್ಷ ದ ಅವಧಿಯಲ್ಲಿ ಮಾರಲು ಅವಕಾಶವಿಲ್ಲ.

ಸೈನ್ಯ ಭೂ ಸುಧಾರಣಾ ಯೋಜನೆ ಯಲ್ಲಿ ಪಡೆದ ಭೂಮಿಯನ್ನು ಸಂರಕ್ಷಿಸುವ ಭೂ ಹಂಚುವ ಮತ್ತು ಕಂದಾಯ ಎತ್ತು ವ ಕ್ರಮವನ್ನು ನಿರ್ಧರಿಸುವದು.

ಹೊಸ ಭೂ ಸುಧಾರಣೆಯ ಮೇರೆಗೆ ಭೂಮಿಯನ್ನು ವಾಂಛಲು ನಿರಾಕರಿಸುವ ವನಿಗೆ ಅಥವಾ ಮಾರಾಟಕ್ಕೆ ಕಡೆಯ ನ್ನಂಟು ಮಾಡುವನಿಗೆ ಯಾವ ಅಪೀಲಿ ಗೆ ಅವಕಾಶ ಕೊಡದೆ ಐದು ವರ್ಷಗಳ ಶಿಕ್ಷೆಯನ್ನು ವಿಧಿಸಲಾಗುವುದು.

ಹಿಂದಿನಿಂದ ಮತ್ರ ೨೦೦ ಏಕರೆಗಳ ಗಂತ ಹೆಚ್ಚಿನ ಭೂಮಿಯನ್ನು ಹೊಂದ ಬಹುದು?

ಭೂಮಿಯನ್ನು ಹಂಚುವಾಗ್ಗೆ ವಿವಾ ಹಿತರಿಗೆ ಪ್ರಥಮ ಪ್ರಾಶಸ್ತ್ಯ ಕೊಡಲಾ ಗುವುದು.

ಈಜಿಪ್ಟಿನ ೭೦ ಲಕ್ಷ ಎಕರೆ ಸಾಗುವಳಿಯಲ್ಲಿ ಜಮೀನು ಬಹುತರ ೫೦ ಶೇಕಡ ವಾಜಿ ಪಾಶಾರ ಒಡೆತನದಲ್ಲಿದೆ. ೨೦ ಲಕ್ಷ ಜನರ ಒಡೆತನದಲ್ಲಿ ೭೮೮೭೪ ಏ ಕರೆ ಜಮೀನಿದೆ. ಇದರಿಂದ ಪ್ರತಿಯೊ ಬ್ಬನಿಗೆ ೨/೫ ಎಕರೆ ಜಮೀನು ಬರುತ್ತದೆ.

ಈಜಿಪ್ಟಿನ ಎರಡು ಕೋಟಿ ಜನಸಂ ಖ್ಯೆಯಲ್ಲಿ ಬಹುಸಂಖ್ಯಾತರೆಂದರೆ ಭೂರಹಿತ 'ಫೆಲಾಹೀನ್' (ಕೃಷಾಣರು)ರಿದ್ದಾರೆ.

ಈಜಿಪ್ಟದಲ್ಲಿ ಒಬ್ಬನೇ ಅತಿ ಹೆಚ್ಚು ಭೂಮಿಯ ಒಡೆತನವನ್ನು ಹಡೆದವನೆಂದ ರೆ ಮಾಜಿ ಅರಸು ಫರೂಕರು. ಅವರೊ ಬ್ಬರ ಒಡೆತನದಲ್ಲಿ ೨ ಲಕ್ಷ ಎಕರೆ ಜಮೀ ನಿದ್ದಿತು. ಈಗ ಈ ಜಮೀನೆಲ್ಲ ಸರಕಾರ ದ ವಶವಾಗಿದೆ.

ಮುಖ ಪತ್ರ.

ಈಗ ಹೊಸದಾಗಿ ಬಂದಿರುವ ನಮ್ಮ ಅಮೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜಂಟರು ಬೇಕಾಗಿದ್ದಾರೆ ಇದಕ್ಕೆ ಪ್ರತಿಯಾಗಿ 15 ಯಾ 17 ಜ್ಯೂವೆಲ್‌ಗಳುಳ್ಳ ಸ್ವಿಸ್ ರಚಿತ ರಿಸ್ಟ್‌ವಾಚು, ಸೈಕಲ್, ಅಥವಾ ರೇಡಿಯೋವು ಮುಫತ್ತಾಗಿ ದೊರೆಯುವದು. ಇದು ಲಾಟರಿ, ಜೂಜು ಯಾ ಚಕ್ರಬಂಧ ಸ್ಪರ್ಧೆಯಲ್ಲ. ಒಂದು ಫೌಂಟನ್ ಪೆನ್ನಿಗೂ ಅಕ್ಕೊಷಪೈ ಮಾಡತಕ್ಕ ಕೆಟಲಾಗ್ ಮತ್ತಿತರ ಮಾಹಿತಿಗಳಿಗೆ ಬರೆಯಿರಿ.

THE UNIVERSAL MUTUAL CORPORATION (K M,)

P. O. Box No. 4013, BOMBAY—7.

Edited printed and published by P. I. Belliapa at 'Kodagu' Press, Mercara, for Kodagu Ltd.